ಜನರಿಗೆ ರಕ್ಷಣೆ ಕೊಡಬೇಕಾದ ಅವಶ್ಯಕತೆ ಇಂದು ಇದೆ. ಇದನ್ನು ಹೇಳಿದರೆ ಸರ್ಕಾರಕ್ಕೆ ವಿರೋಧವನ್ನು ವ್ಯಕ್ತಪಡಿಸಬೇಕು ಎನ್ನುವ ಉದ್ದೇಶದಿಂದಲೇ ಈ ಮಾತನ್ನು ಹೇಳುತ್ತಿದ್ದಾರೆ ಎನ್ನುವ ಭಾವನೆ ಈಗ ಬರುತ್ತದೆ. ಇದರ ಬಗ್ಗೆ ಮುಖತಃ ನೀವೇ ಹೋಗಿ ನೋಡಿ ಎಂದರೆ, ನಾವು ಹೋಗಿ ನೋಡಿದರೂ ಕೂಡ ನಮ್ಮ ಪಕ್ಷದ ಪರವಾಗಿಯೇ ಹೇಳಿಕೆಯನ್ನು ಕೊಡುತ್ತೇವೆಯಾದ್ದರಿಂದ ನಾವು ಅಲ್ಲಿಗೆ ಹೋಗುವುದಿಲ್ಲವೆನ್ನುತ್ತಾರೆ. ಆದರೆ ನಮಗೆ ಆ ಭಾವನೆ ನಿಮ್ಮ ಮೇಲೆ ಇಲ್ಲ. ಒಟ್ಟಿನಲ್ಲಿ ಅಮಾಯಕರಿಗೆ ಆಗುತ್ತಿರುವ ತೊಂದರೆಗಳು ನಿಲ್ಲಬೇಕು ಮತ್ತು ಇಂಥ ತೊಂದರೆಗಳು ಕೊನೆಯಾಗಬೇಕು ಎನ್ನುವುದೇ ನಮ್ಮ ಅಭಿಪ್ರಾಯವಾಗಿದೆ. ಇಂದು ಅಭಿವೃದ್ಧಿಗಿಂತ ಜನರು ಹಾಗೂ ಜನರ ಆಸ್ತಿಗಳಿಗೆ ರಕ್ಷಣೆ ಬೇಕಾಗಿದೆ. ಜನರು ಯಾವುದೇ ಭಯಭೀತಿ ಇಲ್ಲದೇ ಓಡಾಡಲು ವ್ಯವಸ್ಥೆಯಾಗಬೇಕು. ಇದನ್ನು ಸರ್ಕಾರ ತೀವ್ರವಾಗಿ ಗಣನೆಗೆ ತೆಗೆದುಕೊಂಡು ವ್ಯವಸ್ಥೆಗಳನ್ನು ಮಾಡಬೇಕೆಂದು ಹೇಳಿ ಇಂದು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

12. ಶಾಸನ ರಚನಾ ಕಾರ್ಯಕಲಾಪ

ಕರ್ನಾಟಕ ಪಂಚಾಯತ್ ರಾಜ್ ಎರಡನೇ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೆ, "2000ನೇ ಇಸವಿಯ ಕರ್ನಾಟಕ ಪಂಚಾಯತ್ ರಾಜ್ ಎರಡನೇ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

(ಪ್ರಸ್ತಾವವನ್ನು ಮಂಡಿಸಲಾಯಿತು)

+ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯನ್ನು ಈಗಾಗಲೇ ಹೊರಡಿಸಿರುವ ಆರ್ಡಿನೆನ್ಸ್‌ನ್ನು ರೀಪ್ಲೇಸ್ ಮಾಡುವುದಕ್ಕೋಸ್ಕರ ತಂದಿದ್ದೇವೆ. ಇದು ಈಗಾಗಲೇ ಈ ಮನೆಯಲ್ಲಿ ಪಾಸ್ ಆಗಿದೆ. ಇದು ಮೇಲ್ಮನೆಗೆ ಹೋದಾಗ ಅವರು ಇದರ ಮೇಲೆ ಒಂದು ಚಿಕ್ಕ ತಿದ್ದುಪಡಿಯನ್ನು ಮಾಡಿದ್ದಾರೆ. ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಆದಕಾರಣ ತಿದ್ದುಪಡಿಯೊಂದಿಗೆ ಪುನಃ ಈ ಸಭೆಯ ಮುಂದೆ ತಂದಿದ್ದೇವೆ. ಆರ್ಡಿನೆನ್ಸ್ ರೀಪ್ಲೇಸ್ ಬಿಲ್‌ನ್ನು ನಾವು ತಂದಾಗ ಇದರಲ್ಲಿ ಎರಡ್ಮೂರು ಬೇರೆ ಅಂಶಗಳನ್ನು ನಾವು ಸೇರಿಸಿದ್ದೆವು. ಈ ಅಂಶಗಳೆಂದರೆ ಪಂಚಾಯತಿಗೆ ಕೊಡುತ್ತಿದ್ದ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಎರಡು ಲಕ್ಷ ರೂಪಾಯಿಗಳಿಗೆ ಏರಿಸಿದ್ದು, ಪಂಚಾಯತಿಗೆ ಸದಸ್ಯರಾಗಲು ಲಿಟ್ರಿನ್ ಇರಲೇಬೇಕು ಎಂದು ಏನು ಇತ್ತು ಆ ಲಿಟ್ರಿನ್ ಡಿಸ್‌ಕ್ವಾಲಿಫಿಕೇಶನ್‌ನ್ನು ನಾವು ತೆಗೆದುಹಾಕಿದೆವು. ಈ ಲಿಟ್ರಿನ್ ಡಿಸ್‌ಕ್ವಾಲಿಫಿಕೇಶನ್ ವಿಚಾರ ಹೈಕೋರ್ಟ್ ಮುಂದೆ ಹೋದಾಗ ಅವರು ಒಂದು ವಿಚಾರವನ್ನು ನಮ್ಮ ಮುಂದೆ ಇಟ್ಟು ನಿಗಧಿತ ಅವಧಿಯೊಳಗೆ ಅವರು ಲೆಟ್ರಿನ್‌ನ್ನು ಕಟ್ಟಿದರೆ ಡಿಸ್‌ಕ್ವಾಲಿಫಿಕೇಶನ್ ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಏಕೆಂದರೆ ಕೇವಲ ಶೌಚಾಲಯ ಇಲ್ಲವೆಂದು ಹೇಳಿ ಸದಸ್ಯರಾಗಲು ಅವಕಾಶ

ಕೊಡದಿದ್ದರೆ ಇದರಿಂದ ಅವರಿಗೆ ಬಹಳ ಅನ್ಯಾಯವಾಗುತ್ತಿತ್ತು. ಯಾರ ಮನೆಯಲ್ಲಿ ಲಿಟ್ರಿನ್ ಕಟ್ಟುವುದಕ್ಕೆ ಜಾಗವಿರುವುದಿಲ್ಲವೋ ಅಂಥವರು ಸದಸ್ಯರಾಗಲು ತೊಂದರೆಯಾಗಬಹುದು ಎನ್ನುವ ಉದ್ದೇಶದಿಂದ ಶೌಚಾಲಯವಿರಬೇಕೆನ್ನುವುದನ್ನು ನಾವು ತೆಗೆದುಹಾಕಿದೆವು. ಮೇಲ್ಮನೆಯಲ್ಲಿ ಇದರ ಬಗ್ಗೆ ಒಂದು ರಚನಾತ್ಮಕವಾದ ಸಲಹೆಯನ್ನು ಕೊಟ್ಟರು. ಈಗಾಗಲೇ ಹೈಕೋರ್ಟ್ ಏನು ಅಭಿಪ್ರಾಯವನ್ನು ಶೌಚಾಲಯದ ಬಗ್ಗೆ ಹೇಳಿದೆ ಅದೇ ಅಭಿಪ್ರಾಯದಂತೆ ಒಂದು ವರ್ಷದೊಳಗೆ ಲೆಟ್ರಿನ್ ಕಟ್ಟುವುದಾದರೆ ಒಳ್ಳೆಯದು ಎಂದು ಮೇಲ್ಮನೆಯಲ್ಲಿ ಹೇಳಿದರು. ಇದು ಒಂದು ರೀತಿಯಲ್ಲಿ ರಚನಾತ್ಮಕವಾದ ಸಲಹೆಯೇ ಆಗಿದ್ದರಿಂದ ನಾನು ಮುಖ್ಯಮಂತ್ರಿಗಳ ಜೊತೆ ಇದರ ಬಗ್ಗೆ ಸಮಾಲೋಚನೆ ಮಾಡಿದಾಗ ಅವರೂ ಕೂಡ ಒಪ್ಪಿದ್ದರಿಂದ, ನಾವು ಮೇಲ್ಮನೆಯವರು ಕೊಟ್ಟ ಸಲಹೆಯನ್ನು ಒಪ್ಪಿಕೊಂಡೆವು. ಮೇಲ್ಮನೆಯಲ್ಲಿ ಅವರ ಸಂಖ್ಯಾಬಲ ಜಾಸ್ತಿ ಇದ್ದರೂ ಕೂಡ ಅವರು ಈ ಬಿಲ್‌ನ್ನು ಒಪ್ಪಿದ್ದಾರೆ. ಏಕೆಂದರೆ ನಾವೂ ಕೂಡ ಅವರ ರಚನಾತ್ಮಕವಾದ ಸಲಹೆಯನ್ನು ಒಪ್ಪಿಕೊಂಡಿದ್ದೇವೆ. ಒಂದು ರಚನಾತ್ಮಕವಾದ ವಾತಾವರಣವನ್ನು ಕಲ್ಪಿಸಬೇಕೆನ್ನುವ ಉದ್ದೇಶದಿಂದಲೇ ನಾವು ಇದನ್ನು ಒಪ್ಪಿದ್ದೇವೆ. ಅದನ್ನು ಬಿಟ್ಟು ಈ ಮನೆಯಲ್ಲಿ ನಮಗೆ ಸಂಖ್ಯಾ ಬಲ ಇದೆಯೆಂದು ಹೇಳಿ ನಾವು ಒಂದು ಬಿಲ್‌ನ್ನು ಪಾಸ್ ಮಾಡುವುದು, ಇದೇ ಬಿಲ್‌ನ್ನು ಮೇಲ್ಮನೆಯಲ್ಲಿ ಅವರುಗಳು ಸಂಖ್ಯಾಬಲ ಜಾಸ್ತಿ ಇದೆಯೆಂದು ಹೇಳಿ ವಿರುದ್ಧವಾಗಿ ಬಿಲ್ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಆಗುತ್ತದೆ. ಪ್ರತಿಯೊಂದು ಬಿಲ್ ಕೂಡ ಈ ಮನೆಯಿಂದ ಆ ಮನೆಗೆ ಹೋಗಬೇಕು, ನಂತರ ಆ ಬಿಲ್ ಆ ಮನೆಯಿಂದ ಈ ಮನೆಗೆ ಬರಬೇಕು. ಅಲ್ಲಿ ಬಿಲ್ ಪಾಸ್ ಆಗದಿದ್ದರೆ ಮತ್ತೆ ಈ ಮನೆಯಲ್ಲಿ ಪಾಸ್ ಮಾಡಿ ಪುನಃ ಆ ಮನೆಗೆ ಹೋಗಬೇಕು. ಇದು ಸತ್ಸಂಪ್ರದಾಯವಾಗುವುದಿಲ್ಲ. ಅಲ್ಲಿರತಕ್ಕಂಥವರೆಲ್ಲರೂ ಅರ್ಥಮಾಡಿಕೊಂಡು ಇದರ ಬಗ್ಗೆ ಒಂದು ತೀರ್ಮಾನಕ್ಕೆ ಬಂದಿದ್ದಾರೆ.

ಇಂಥ ಒಂದು ರಚನಾತ್ಮಕವಾದಂಥ ಸಲಹೆ ಬಂದಾಗ ಸರ್ಕಾರ ಅದನ್ನು ಬಿಚ್ಚು ಮನಸ್ಸಿನಿಂದ ಒಪ್ಪಿಕೊಳ್ಳುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಈ ಅಮೆಂಡ್‌ಮೆಂಟನ್ನು ಅಲ್ಲಿ ಮಾಡಿರುವುದರಿಂದ ಈಗ ಅದು ಈ ಮನೆಯ ಮುಂದೆ ಬಂದಿದೆ. ಇಲ್ಲದಿದ್ದರೆ ಬರುತ್ತಿರಲಿಲ್ಲ. ನಾವು ಮಾಡಿರತಕ್ಕಂಥ ಎರಡು ಆರ್ಡಿನೆನ್ಸ್‌ಗಳೂ ಎರಡನೇ ತಾರೀಖು ಲ್ಯಾಪ್ಸ್ ಆಗುತ್ತವೆ. ಆದಕಾರಣ, ಮೇಲ್ಮನೆಯಲ್ಲಿ ಅಮೆಂಡ್ ಆಗಿರುವಂತೆ ಇದನ್ನು ತಾವು ಇಲ್ಲಿ ಪಾಸ್ ಮಾಡಿಕೊಟ್ಟರೆ, ನಾಳೆ ಗವರ್ನರ್ ಕಡೆ ಕಳುಹಿಸಿ, ನಾಡಿದ್ದು ನೋಟಿಫಿಕೇಷನ್ ಮಾಡಿ ಈ ಆರ್ಡಿನೆನ್ಸ್ ಲ್ಯಾಪ್ಸ್ ಆಗದಂತೆ ನೋಡಿಕೊಳ್ಳಲಾಗುತ್ತದೆ. ಈ ವಿಷಯದಲ್ಲಿ ತಾವೆಲ್ಲರೂ ಸಹಕಾರ ಕೊಡುತ್ತೀರಿ ಎಂದು ನಂಬಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಆಗಲೇ ಹೇಳಿದರು. ಅವರು ಈ ಮನೆಯಲ್ಲಿ ಮಾಡಿದ ಹಾಗೆ ನಮ್ಮವರು ಆ ಮನೆಯಲ್ಲಿ ಮಾಡಲಿಲ್ಲ ಎನ್ನುವುದನ್ನು ಅವರು ಒಪ್ಪಿದ್ದಾರೆ. ಅಲ್ಲಿ ನಮ್ಮ ಸಂಖ್ಯಾ ಬಲ ಎಷ್ಟೇ ಇದ್ದರೂ ಕೂಡ ರಚನಾತ್ಮಕವಾಗಿರತಕ್ಕಂಥ ಸಲಹೆಯನ್ನು ಕೊಟ್ಟು ಅಮೆಂಡ್‌ಮೆಂಟನ್ನು ಮಾಡಿ ಒಪ್ಪಿ ಕಳುಹಿಸಿದ್ದಾರೆ. ಅವರು ಅದನ್ನು ಅಲ್ಲಿ ತಿರಸ್ಕಾರ ಮಾಡಲಿಲ್ಲ. ಇವರು ಇಲ್ಲಿ ಸಂಖ್ಯಾ ಬಲ ಇದ್ದಾಗ ಏನು ಮಾಡಿದರು. ಆ

ರೀತಿಯಲ್ಲಿ ಅಲ್ಲಿ ನಮ್ಮವರು ಮಾಡಲಿಲ್ಲ ಎನ್ನುವ ಬಹಳ ಒಳ್ಳೆಯ ಮಾತನ್ನು ಸಚಿವರು ಹೇಳಿದ್ದಾರೆ. ಮಾನ್ಯ ಸಚಿವರಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಆ ಮನೆ ಒಂದು ಪಾಠ ಹೇಳಿದೆ ಎಂದು ಕಾಣಿಸುತ್ತದೆ. ಇನ್ನು ಮುಂದೆಯಾದರೂ ಕೂಡ ನಮ್ಮಿಂದ ಇಂಥ ಒಂದು ರಚನಾತ್ಮಕ ಸಲಹೆಯನ್ನು ಪಡೆದುಕೊಳ್ಳುವಂಥ ಕೆಲಸವನ್ನು ಈ ಮನೆಯಲ್ಲಿ ತಾವು ಮಾಡಬೇಕು ಎನ್ನುವುದೇ ನನ್ನ ಕೋರಿಕೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ಒಂದು ಕಾಲದಲ್ಲಿ ಚರ್ಚೆ ಮಾಡುವಂಥ ವಾತಾವರಣ ಈ ಮನೆಯಲ್ಲೂ ಇರಲಿಲ್ಲ. ಆ ಮನೆಯಲ್ಲಿ ಕೂಡ ಇರಲಿಲ್ಲ. ಅಲ್ಲಿ ಸಂಖ್ಯಾ ಬಲದ ಪ್ರಕಾರ ನಮ್ಮ ಬಿಲ್ ಡಿಫೀಟ್ ಆಯಿತು. ಅದನ್ನು ಮತ್ತೆ ನಾವು ಇಲ್ಲಿ ತರಬೇಕಾಯಿತು. ಮತ್ತೆ ಅಲ್ಲಿಗೆ ಎರಡನೇ ಸಲ ಹೋದಾಗ ಅನಿವಾರ್ಯವಾಗಿ ಪಾಸ್ ಆಗಬೇಕಾಯಿತು. ಇದು ಒಳ್ಳೆಯ ಸಂಪ್ರದಾಯವಲ್ಲ ಎಂದು ನಾನು ಹೇಳಿದೆ. ಏಕೆಂದರೆ 1993ರಲ್ಲಿ ಪಂಚಾಯತ್‌ರಾಜ್‌ಗೆ ನಾವು ಸಮಗ್ರವಾದಂಥ ತಿದ್ದುಪಡಿ ತಂದು, ಮೂರು ಹಂತದ ಪಂಚಾಯತ್ ರಿಸರ್ವೇಷನ್ಸ್ ರೊಟೇಷನ್ ತಂದಾಗ ಕೂಡ ಇಲ್ಲಿ ಅದು ಡಿಫೀಟ್ ಆಯಿತು. ಈ ಮನೆಯಲ್ಲಿ ವಿರೋಧ ಪಕ್ಷದವರು ಅದಕ್ಕೆ ವಿರೋಧವಾಗಿ ಓಟು ಹಾಕಿದರು. ಆದರೆ, ಆ ಮನೆಯಲ್ಲಿ ಅವರಿಗೆ ಸಂಖ್ಯಾ ಬಲ ಇದ್ದರೂ ಕೂಡ 2-3 ತಿದ್ದುಪಡಿಗಳನ್ನು ಮಾಡಿ ಅದನ್ನು ಅವಿರೋಧವಾಗಿ ಪಾಸ್ ಮಾಡಿದರು. 1983ರ ಆಕ್ಟ್‌ಗೆ ಹೋಲಿಸಿದರೆ, ಬಹಳಷ್ಟು ವ್ಯತ್ಯಾಸಗಳಿದ್ದಂಥ ಮಸೂದೆಯನ್ನು ಕೂಡ ಕೆಲವು ತಿದ್ದುಪಡಿಗಳನ್ನು ಮಾಡಿ ಪಾಸ್ ಮಾಡಿದರು. ಕಾನ್‌ಸ್ಟಿಟ್ಯೂಷನ್ ಪ್ರಕಾರ ನಾವು ಇದನ್ನು ಮಾಡಲೇಬೇಕು ಎಂದು ಹೇಳಿದಾಗ ಆ ಮಾತಿಗೆ ಬೆಲೆ ಕೊಟ್ಟು, ಸಂಖ್ಯಾ ಬಲ ಇದ್ದರೂ ಕೂಡ ಅವರು ಅವಿರೋಧವಾಗಿ ಪಾಸ್ ಮಾಡಿದ್ದಾರೆ. ಇದು ಪ್ರಜಾಪ್ರಭುತ್ವದಲ್ಲಿ ನೆನಪಿಡುವಂಥ ಒಂದು ದಾಖಲೆಯಾಗಿದೆ. ಅಂಥ ಒಂದು ವಾತಾವರಣ ಇಲ್ಲದೇ ಹೋದರೆ ನಾವು ರಚನಾತ್ಮಕವಾಗಿ ಚರ್ಚೆ ಮಾಡುವುದು ಕಷ್ಟವಾಗುತ್ತದೆ ಮತ್ತು ತರ್ಕಬದ್ಧವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳಲೂ ಕೂಡ ಕಷ್ಟವಾಗುತ್ತದೆ. ಆದಕಾರಣ, ವೈಯಕ್ತಿಕವಾಗಿ ನನಗೆ ಬಹಳ ಸಂತೋಷವಾಗಿದೆ. ಯಾವ ಒಂದು ವಾತಾವರಣದಲ್ಲಿ ಈ ಬಿಲ್ ಅಲ್ಲಿ ಪಾಸ್ ಆಯಿತು, ಅದೇ ವಾತಾವರಣ ಇಲ್ಲೂ ಕೂಡ ಬರಲಿ ಎಂದು ನಾನು ಪ್ರಾರ್ಥಿಸುತ್ತೇನೆ.

+ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಈಗ ತಂದಿರುವ ತಿದ್ದುಪಡಿಯ ಬಗ್ಗೆ ಹಿಂದೆಯೆಲ್ಲಾ ಚರ್ಚೆಯಾಗಿದೆ. ಈ ಸಂದರ್ಭದಲ್ಲಿ ನಾವು ಒಂದು ಮಾತನ್ನು ಹೇಳಬೇಕಾಗಿದೆ. ಮಾನ್ಯ ಘೋರ್ಪಡೆಯವರು ಹಿರಿಯ ಸಚಿವರಾಗಿದ್ದಾರೆ. ಈ ರಚನಾತ್ಮಕವಾದ ಸಲಹೆಯನ್ನು ಈ ಸದನದಲ್ಲೂ ನಾವು ಕೊಟ್ಟಿದ್ದೆವು. ಆಗ ಅದನ್ನು ಏಕೆ ತಾವು ಸ್ವೀಕರಿಸಲಿಲ್ಲ? ಅಂದರೆ ಈ ಸದನದ ಸದಸ್ಯರು ಏನಾದರೂ ಮಾತನಾಡಿದರೆ ಅದು ಮಾನ್ಯ ಸಚಿವರಿಗೆ ರಚನಾತ್ಮಕವೆಂದು ಅನ್ನಿಸುತ್ತದೋ ಅಥವಾ ಇಲ್ಲವೋ ಎಂದು ಹೇಳಬೇಕು. ಅದನ್ನೇ ವಿಧಾನ ಪರಿಷತ್ತಿನಲ್ಲಿ ಮಾತನಾಡಿದ ತಕ್ಷಣ, ಅದು ರಚನಾತ್ಮಕ ಸಲಹೆ ಎಂದು ಸ್ವೀಕಾರ ಮಾಡಿದ್ದೇವೆ ಎಂದು ಇಲ್ಲಿ ತರುತ್ತಾರೆ. ಅದನ್ನು ನಾವು ಇಲ್ಲೇ ಹೇಳಿದ್ದೆವು. ಆಯ್ಕೆಯಾದ ನಂತರದಲ್ಲಿ ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಶೌಚಾಲಯ ಕಟ್ಟಬೇಕು ಎನ್ನುವುದು ಕಡ್ಡಾಯ ಎಂದು ಮಾಡಿ ಎಂದು ಹೇಳಿದ್ದೆವು.

ಡಿಬೇಟ್ ನೋಡಿದರೆ ಗೊತ್ತಾಗುತ್ತದೆ. ಆಗ ಅದು ರಚನಾತ್ಮಕವಾದ ಸಲಹೆ ಎಂದು ಮಾನ್ಯ ಸಚಿವರಿಗೆ ಏಕೆ ಅನ್ನಿಸಲಿಲ್ಲ ಎಂದು ನನಗೆ ಗೊತ್ತಾಗುತ್ತಿಲ್ಲ. ಆದರೆ ಆ ಸದನದಲ್ಲಿ ಈ ಭಾವನೆ ವ್ಯಕ್ತವಾದಾಗ, ಆಡಳಿತ ಪಕ್ಷದವರು ಈ ಧೋರಣೆಯಲ್ಲಿ, ಈ ದೃಷ್ಟಿಕೋನದಲ್ಲಿ ಏಕೆ ನೋಡುತ್ತಾರೆ? ಇಲ್ಲಿ ನಮಗೆ ಬಹುಮತ ಇದೆ. ನಾವು ಹೇಗೂ ಪಾಸ್ ಮಾಡಿಕೊಳ್ಳಬಹುದು, ನೀವು ಏನಾದರೂ ಮಾತನಾಡಿ ಎನ್ನುವ ಧ್ವನಿ ಏಕೆ? ಅದೇ ಅಲ್ಲಿ ಹೋದತಕ್ಷಣ ರಚನಾತ್ಮಕ ಎಂದು ಏಕಾಗುತ್ತದೆ? ಇದು ಈ ಸದನಕ್ಕೆ ಗೌರವ ತರುವಂಥ ಸಂಗತಿ ಅಲ್ಲ. ರಚನಾತ್ಮಕ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದರೆ, ಅದು ನಮ್ಮ ಸದನಕ್ಕೆ ಶೋಭೆ ತರುವುದಿಲ್ಲ ಎನ್ನುವುದನ್ನು ನಾವು ಖಡಾಖಂಡಿತವಾಗಿ ಹೇಳಬೇಕಾಗುತ್ತದೆ. ಇದೇ ಸಲಹೆಯನ್ನು ನಾವು ಸಹ ಕೊಟ್ಟಿದ್ದೇವಲ್ಲ. ಜೊತೆಗೆ ನಾವು ಇನ್ನೊಂದು ಸಲಹೆಯನ್ನೂ ಕೊಟ್ಟಿದ್ದೆವು. ಈಗಲಾದರೂ ಮಾನ್ಯ ಸಚಿವರು ಈ ಸಲಹೆಯನ್ನು ಪರಿಗಣಿಸಬೇಕು. ಅದು ಬಹಳ ರಚನಾತ್ಮಕವಾದ ಸಲಹೆ. ಈ ಸದನದ ದೃಷ್ಟಿಯಿಂದ, ಈ ರಾಜ್ಯದ ಜನತೆಯ ದೃಷ್ಟಿಯಿಂದ ಮತ್ತು ವಿಕೇಂದ್ರೀಕರಣ ವ್ಯವಸ್ಥೆಗೆ ಶಕ್ತಿ ತುಂಬುವ ದೃಷ್ಟಿಯಿಂದ, ಜನ ಮತ್ತು ಜನ ಪ್ರತಿನಿಧಿಗಳಿಗೆ ಗೌರವ ಸಿಗುವ ದೃಷ್ಟಿಯಿಂದ, 2 ಲಕ್ಷ ಮಾಡಿರುವುದನ್ನು 5 ಲಕ್ಷ ಮಾಡಿ ಎಂದು ಕೇಳಿದ್ದೆವು. ಆರ್ಥಿಕವಾಗಿ ಅವಕಾಶವಾದಾಗ ಮಾಡುತ್ತೇವೆ ಎಂದು ಹೇಳಿದ್ದಿರಿ. ನಾನ್-ಪ್ಲಾನ್ ಎಕ್ಸ್‌ಪೆಂಡೀಚರ್‌ನ್ನು ಕಡಿಮೆ ಮಾಡಿ, ವಿಕೇಂದ್ರೀಕರಣ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಹೆಚ್ಚುಹೆಚ್ಚು ಹಣವನ್ನು ಅದಕ್ಕೆ ಕೊಡಿ ಎಂದು ನಾವು ಹೇಳಿದ್ದೆವು. ಈಗಲಾದರೂ ಅದು ರಚನಾತ್ಮಕ ಎಂದು ಮಾನ್ಯ ಸಚಿವರಿಗೆ ಅನ್ನಿಸುತ್ತದೋ, ಇಲ್ಲವೋ ಎನ್ನುವಂಥಾದ್ದರ ಬಗ್ಗೆ ಅವರು ಹೇಳಬೇಕು. ಇನ್ನೊಂದು ಸಲಹೆ ಕೌನ್ಸಿಲ್‌ಗೆ ಹೋದಮೇಲೆ ಅಥವಾ ಗವರ್ನರ್ ಅಬ್ಜರ್ವನ್ ರೈಸ್‌ಮಾಡಿದ ಮೇಲೆ ಅಥವಾ ಬೇರೆ ಯಾವುದೋ ಸಂದರ್ಭದಲ್ಲಿ ಅದು ರಚನಾತ್ಮಕ ಎನಿಸುತ್ತದೋ? ಮೊದಲನೆಯದಾಗಿ, ಈ ಸದನವನ್ನು ಗೌರವದಿಂದ ಕಾಣಬೇಕು. ಅವರಿಗೆ ಬಹುಮತವಿರುವುದರಿಂದ ಸಂಖ್ಯಾ ಬಲದ ಮೇಲೆ ಪಾಸ್ ಮಾಡಿಕೊಳ್ಳುತ್ತಾರೆ ಎನ್ನುವಂಥಾದ್ದು ಇದ್ದರೂ ಸಹ ಇಲ್ಲಿ ಹೇಳುವಂಥ ಸಲಹೆಯನ್ನು ಗೌರವದ ಭಾವನೆಯಿಂದ ಕಾಣಬೇಕು. ಎರಡನೆಯದಾಗಿ, ಇನ್ನೊಂದು ರಚನಾತ್ಮಕ ಸಲಹೆ ಎಂದು ನಾವು ಕೊಟ್ಟಿರುವುದು, 2 ಲಕ್ಷದಿಂದ 5 ಲಕ್ಷ ಮಾಡಬೇಕು ಎಂದು. ಈಗಲಾದರೂ ಆ ಸಲಹೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರಿಗೆ ತಾವೂ ಒಂದು ಮಾತು ಹೇಳಿ, ಅದನ್ನು 5 ಲಕ್ಷ ಮಾಡಿಸುವುದಕ್ಕೆ ಪ್ರಯತ್ನ ಈ ಸದನದಿಂದ ಆಗಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತಿದ್ದೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಈ ಬಗ್ಗೆ ಚರ್ಚೆಯಾದಾಗ ನಾವು ಅಂದುಕೊಂಡಿದ್ದೆವು, ಈ ಕಡೆಯಿಂದ ಸಲಹೆ ಕೊಟ್ಟಂಥಾದ್ದು ಮತ್ತು ಹಿಂದೆ ನಮ್ಮ ಸರ್ಕಾರ ಕೂಡ ಮಾಡಿದಂಥಾದ್ದೂ ಎಂದರೆ, ಆಯ್ಕೆಯಾದಂಥ 75 ಸಾವಿರ ಸದಸ್ಯರಿಗೆ ಶೌಚಾಲಯ ಇದ್ದರೆ ಅದು ಬೇರೆಯವರ ಮೇಲೆ ಪರಿಣಾಮವಾಗುತ್ತದೆ. ಕೊನೆಯ ಪಕ್ಷ 75 ಸಾವಿರ ಶೌಚಾಲಯಗಳಾದರೂ ಆಗುತ್ತವೆ. ಅದನ್ನೇ ನಾವೂ ಸಹ ತಮಗೆ ತಿಳಿಸಿದ್ದೆವು. ಹೈಕೋರ್ಟ್ ಹೇಳಿರುವಂತೆ ಆರು ತಿಂಗಳು ಅಥವಾ ಒಂದು ವರ್ಷದಲ್ಲಿ ಮಾಡಲಿ ಎಂದು ಹೇಳಿದಾಗ ತಾವು ಅದನ್ನು ಇಲ್ಲಿ ಒಪ್ಪಲಿಲ್ಲ. ಸಂಪೂರ್ಣವಾಗಿ ಬೇಡವೇ ಬೇಡ ಎಂದು

ಹೇಳಿದಿರಿ. ಆ ಸದನಕ್ಕೆ ಅದು ಹೋದಮೇಲೆ, ಅಲ್ಲಿ ಬಹುಮತ ಇಲ್ಲ ಎಂದು ತಾವು ಅರ್ಥಮಾಡಿಕೊಂಡು ಅದನ್ನು ಅಲ್ಲಿ ಒಪ್ಪಿಕೊಂಡು, ಮತ್ತೆ ಆ ತಿದ್ದುಪಡಿಯನ್ನು ಸ್ಮಾಲ್ ಅಮೆಂಡ್‌ಮೆಂಟ್ ಎಂದು ಇಲ್ಲಿ ತಂದಿದ್ದೀರಿ. ನಾವು ಆವತ್ತು ಕೊಟ್ಟಂಥ ಉದ್ದೇಶವೂ ಅದೇ ಆಗಿತ್ತು. ಇನ್ನು ಮುಂದಕ್ಕೆ ರಾಜ್ಯದಲ್ಲಿ 75 ಸಾವಿರ ಸದಸ್ಯರುಗಳಿಗೆ ಶೌಚಾಲಯಗಳಾದಾಗ, ಬೇರೆಯವರಿಗೂ ಪರಿಣಾಮವಾಗುತ್ತದೆ. ಇದು ಬಹಳ ಒಳ್ಳೆಯದು ಎನ್ನುವ ಘನ ಉದ್ದೇಶವನ್ನಿಟ್ಟುಕೊಂಡು ಹಿಂದಿನ ಸರ್ಕಾರ ಅದನ್ನು ತಂದಂಥಾದ್ದು. ಇವತ್ತು ತಾವೂ ಅದೇ ಉದ್ದೇಶದಿಂದ ಮಾಡಿದ್ದೀರಿ. ಇದನ್ನು ಸ್ವಾಗತ ಮಾಡುತ್ತೇವೆ. ಇಲ್ಲ ಅನ್ನುವುದಿಲ್ಲ. ಮತ್ತೊಂದು ಸಲಹೆ ಎಂದರೆ, 2 ಲಕ್ಷ ಇರುವುದನ್ನು 5 ಲಕ್ಷವಲ್ಲದಿದ್ದರೆ 3 ಲಕ್ಷವಾದರೂ ತಾವು ಮಾಡಬೇಕು. ಇವತ್ತು ತಾವು ಕೊಡುವಂಥ 2 ಲಕ್ಷವನ್ನು ಬೇರೆ ಬೇರೆಯದರಿಂದ ಪೂಲ್-ಆಫ್ ಮಾಡಿ ಕೊಡುತ್ತಿದ್ದೀರಿ. ಹಿಂದೆ 60 ಕೋಟಿ ಕೊಡುತ್ತಿದ್ದೆವು. ಈಗ 120 ಕೋಟಿ ರೂಪಾಯಿ ಆಗಿದೆ ಎಂದು ತಾವು ಮೊನ್ನೆ ಮಾತನಾಡುವಾಗ ತಿಳಿಸಿದ್ದಿರಿ. 3 ಲಕ್ಷವಾದರೂ ಕೊಟ್ಟರೆ ಅನ್ಯ ಪಂಚಾಯಿತಿಗಳು ಉಳಿದುಕೊಳ್ಳಲು ಶಕ್ತಿ ಬರುತ್ತದೆ. ಈಗ ಕೊಡುವಂಥಾದ್ದರಲ್ಲಿ ಪವರ್ ಚಾರ್ಜರ್ ಕಟ್ ಮಾಡುತ್ತಾರೆ. ಹೀಗೆ ಎಲ್ಲವನ್ನೂ ಕಟ್ ಮಾಡಿ ಬರುವಂಥಾದ್ದು ಬಹಳ ಕಡಿಮೆ. ತಮಗೂ ಅದರ ಬಗ್ಗೆ ಗೊತ್ತಿದೆ. ಹೀಗೆ ಪವರ್‌ದು ಆಗಲೀ ಅಥವಾ ಬೇರೆ ಯಾವುದೇ ಡಿಡಕ್ಷನ್ ಆಗಲೀ ಅದನ್ನು ಇಲ್ಲೇ ಸರ್ಕಾರದಲ್ಲೇ ಮಾಡಿ ಕಳುಹಿಸುವುದರಿಂದ ಕಡಿಮೆ ಹಣ ಬರುತ್ತದೆ. ಹೀಗೆ ಕಡಿಮೆ ಹಣ ಬರುವಂಥಾದ್ದು ಆಗಬಾರದು. 2 ಲಕ್ಷ ಸಂಪೂರ್ಣವಾಗಿ ಪಂಚಾಯಿತಿಗಳಿಗೆ ಬರುವಂತಾಗಬೇಕಾಗಿದೆ. ಆದ್ದರಿಂದ, ಮಾನ್ಯ ವಿಶ್ವೇಶ್ವರ ಹೆಗಡೆಯವರು ತಿಳಿಸಿದ ಹಾಗೆ ಮೂರು ಲಕ್ಷವನ್ನು ಕೊಡಲು ಸಪ್ಲಿಮೆಂಟರಿ ಬಜೆಟ್‌ನಲ್ಲಿ ಅಥವಾ ಯಾವುದರಲ್ಲಿ ಆದರೂ ಪ್ರಾವಿಷನ್ ಮಾಡಬಹುದು. ಆದರೆ ಸಂಪೂರ್ಣವಾಗಿ 2 ಲಕ್ಷವಾದರೂ ಬರುವಂತೆ, ಪೂರ್ಣವಾಗಿ ಪಂಚಾಯಿತಿಗಳಿಗೆ ತಲುಪುವಂತೆ ಮಾನ್ಯ ಘೋರ್ಪಡೆಯವರು ಈ ಸದನದಲ್ಲಿ ಘೋಷಣೆ ಮಾಡಬೇಕು. ಈ ಸದನವನ್ನು ಲಘುವಾಗಿ ತೆಗೆದುಕೊಂಡು, ಇಲ್ಲಿ ನಮಗೆ ಬಹುಮತ ಇದೆ ಎಂದು ಬುಲ್‌ಡೋಜ್ ಮಾಡಿ, ಆ ಸದನದಲ್ಲಿ ಬಹುಮತ ಇಲ್ಲ ಎಂದು ಅಲ್ಲಿ ಹೇಳಿದಾಗ ಅದನ್ನು ಒಪ್ಪಿಕೊಂಡು, ಸ್ಮಾಲ್ ಅಮೆಂಡ್‌ಮೆಂಟ್ ಎಂದು ಇಲ್ಲಿ ತರುವಂಥ ಪದ್ಧತಿ ಆಗಬಾರದು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳುತ್ತೇನೆ.

+ಶ್ರೀ ಕೆ. ಶ್ರೀನಿವಾಸಗೌಡ: ಕುದವನಹಳ್ಳಿ (ಕೋಲಾರ): ನಮ್ಮ ಪಕ್ಷದ ಸಿದ್ಧಾಂತವೆಂದರೆ, ಕನಿಷ್ಟ ಪಂಚಾಯಿತಿ ಸದಸ್ಯನಾದಂಥವನಿಗೆ ಶೌಚಾಲಯ ಇರಬೇಕು ಎನ್ನುವುದು. ಅದನ್ನು ನಾವು ಇಷ್ಟೆಲ್ಲಾ ಹೇಳಿದರೂ ನೀವು ಈ ಮನೆಯಲ್ಲಿ ಒಪ್ಪಲಿಲ್ಲ. ಅಲ್ಲಿ ನೀವು ಸೋಲುತ್ತೀರಿ ಎನ್ನುವ ಒಂದೇ ಒಂದು ಕಾರಣದಿಂದ ಅದನ್ನು ರಚನಾತ್ಮಕ ಸಲಹೆ ಎನ್ನುವ ಕಾರಣದಿಂದ ಒಪ್ಪಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಅಲ್ಲೂ ನಿಮಗೆ ಮೆಜಾರಿಟಿ ಇದ್ದಿದ್ದರೆ ನೀವು ಇದನ್ನು ಕೇರ್ ಮಾಡುತ್ತಲೇ ಇರಲಿಲ್ಲ ಎನ್ನುವುದು ನನ್ನ ಅನಿಸಿಕೆ. ಅಲ್ಲಿ ನಿಮಗೆ ಮೆಜಾರಿಟಿ ಇಲ್ಲದೇ ಇರುವುದರಿಂದ, ಅದಕ್ಕೆ ರಚನಾತ್ಮಕ ಎನ್ನುವ ಶಬ್ದ ಉಪಯೋಗಿಸಿ ಹೇಳುತ್ತಿದ್ದೀರಿ. ಆದರೆ ಅದನ್ನು ಈ ಮನೆಯಲ್ಲೇ ನಾವೆಲ್ಲಾ ಹೇಳಿದ್ದೆವು. ಹೈಕೋರ್ಟಿನಲ್ಲಿ ಹೇಳಿರುವಂತೆ ಒಂದು ವರ್ಷದಲ್ಲಿ ಶೌಚಾಲಯ ಕಟ್ಟಲಿ ಎನ್ನುವ ಮಾತನ್ನು ನಮ್ಮ ಕಡೆಯಿಂದ ಹೇಳಿದ್ದೆವು.

ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ ನಮ್ಮ ಸಲಹೆಯನ್ನು ಬುಲ್‌ಡೋಜ್ ಮಾಡಿ ನಮ್ಮಿಂದ ನೀವು ಓಟಿಗೆ ಹಾಕಿ ಗೆದ್ದುಕೊಂಡು ಹೋದಿರಿ. ಅಲ್ಲಿ ಎಲೆಕ್ಟೆಡ್ ಆದಂತಹ ಜನರು, ನಾವು ಇಲ್ಲಿ ಏನು ಹೇಳಿದರೂ ಕೂಡ ಕಿವಿಗೊಡಲಿಲ್ಲ. ಅಲ್ಲಿ ಮೆಜಾರಿಟಿ ಇಲ್ಲದೇ ಇದ್ದ ಸಮಯದಲ್ಲೂ ಕೂಡ ನೀವು ಆದನ್ನು ತಕ್ಷಣ ಒಪ್ಪಿಕೊಂಡು, ನಾವು ಇದನ್ನು ರಚನಾತ್ಮಕವಾಗಿ ಮಾಡಿದ್ದೇವೆನ್ನುವಂಥ ಮಾತನ್ನು ಹೇಳಿದಿರಿ. ಈ ಒಂದು ಪ್ರವೃತ್ತಿಯನ್ನು ದಯವಿಟ್ಟು ಮುಂದೆ ಅನುಸರಿಸಬಾರದು. ಆ ರೀತಿ ಏನಾದರೂ ಇದ್ದರೆ ಇಲ್ಲೇ ಅಮೆಂಡ್‌ಮೆಂಟನ್ನು ಮಾಡಿಕೊಳ್ಳೋಣ. ಇಲ್ಲಿ ಮೆಜಾರಿಟಿ ಇದೆ ಎಂದು ಪಾಸ್ ಮಾಡಿಕೊಂಡು ಹೋಗುವಂಥಾದ್ದು ಸರಿಯಲ್ಲ. ಅದರ ಮಾಹಿತಿಯೂ ನಮಗೆ ಇದೆ. ಆದರೆ ನೀವು ಈ ಮನೆಗೆ ಮೊದಲನೆಯದಾಗಿ ಆದ್ಯತೆಯನ್ನು ಕೊಡಬೇಕು. ನೀವು ಏಳು ಬಾರಿ ಗೆದ್ದು ಬಂದಂತಹ ಹಿರಿಯ ಸಚಿವರಾಗಿದ್ದೀರಿ. ನೀವು ಈ ಮನೆಗೆ ಗೌರವವನ್ನು ಕೊಡಬೇಕು. ಅಂದರೆ ನೀವು ಮೇಲ್ಮನೆಗೆ ಗೌರವ ಕೊಡಬಾರದೆಂದು ಅಲ್ಲ. ನಾವು ಈ ಮನೆಯಲ್ಲಿ ಎಲ್ಲಾ ವಿಧದಲ್ಲೂ ಚರ್ಚೆ ಮಾಡಿದ್ದೇವೆ. ನೀವು ಆ ಚರ್ಚೆಗೆ ಸ್ಪಂದಿಸುವುದನ್ನು ಬಿಟ್ಟು ಬೇರೆ ಮನೆಯಲ್ಲಿ ಇದನ್ನು ಒಪ್ಪಿಕೊಂಡು ಬಂದು ನಾವು ಇದನ್ನು ರಚನಾತ್ಮಕವಾಗಿ ಮಾಡುತ್ತೇವೆನ್ನುವಂತಹ ಮಾತು. ಈ ಮನೆಗೆ ಶೋಭೆ ತರುವಂತಹ ಕೆಲಸವಲ್ಲ. ಚುನಾಯಿತ ಪ್ರತಿನಿಧಿಗಳು ನಾವೇನು ನೇರವಾಗಿ ಜನರಿಂದ ಆರಿಸಿ ಬಂದಿದ್ದೇವೆ. ನಮಗೆ ಇದು ಶೋಭೆ ತರುವಂತಹ ಕೆಲಸವಲ್ಲ. ಇದು ಒಳ್ಳೆಯ ಕೆಲಸವಾಗಿದೆ. ಇದನ್ನು ನಾವು ಮೊದಲೇ ಹೇಳಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್: ನಾವು ಚರ್ಚೆ ಮಾಡಬೇಡಿರೆಂದು ಹೇಳಿದ್ದೆವಾ....

ಶ್ರೀ ಕೆ. ಶ್ರೀನಿವಾಸಗೌಡ: (ಕುದವನಹಳ್ಳಿ): ಒಪ್ಪಲಿಲ್ಲವಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ತಾವು ಬೆಲೆ ಕನ್‌ಫ್ಯೂಸ್ ಮಾಡಿಕೊಂಡಿದ್ದೀರಿ. ಇಲ್ಲಿ ಈ ಬಿಲ್ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಬೇರೆ ಬಿಲ್‌ಗಳು ಚರ್ಚೆಯಾಗದೇ ಇರುವಂಥಾದ್ದು.

ಶ್ರೀ ಕೆ. ಶ್ರೀನಿವಾಸಗೌಡ (ಕುದವನಹಳ್ಳಿ): ಅವರು ಅದನ್ನು ಮರೆತು ಹೋಗಿದ್ದಾರೆ. ಆದುದರಿಂದ ಈ ಮನೆಯನ್ನು ಬಹಳ ಗೌರವದಿಂದ ನೋಡಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿ ನಾನು ಇದನ್ನು ಸ್ವಾಗತ ಮಾಡುತ್ತೇನೆ. ತಮಗೆ ಇಷ್ಟು ತಡವಾಗಿಯಾದರೂ ಬುದ್ಧಿ ಬಂದು ಅದನ್ನು ಒಪ್ಪಿಕೊಂಡಿದ್ದೀರಿ. ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ ಐದು ಲಕ್ಷ ರೂಪಾಯಿಗಳ ಕೊರತೆ ಇರಬಹುದು. ಅದನ್ನು ಮೂರು ಲಕ್ಷ ರೂಪಾಯಿಗಳಿಗೆ ಏರಿಸಿ, ಸುಮಾರು 25-30 ವರ್ಷಗಳ ಹಿಂದೆ ಇದ್ದಂತಹ ವ್ಯವಸ್ಥೆಯ ಬಗ್ಗೆ ಮಾಹಿತಿ ತಮ್ಮಲ್ಲೂ ಇದೆ. ಹಿಂದೆ ಚೇರ್ಮನ್‌ಗಳು ಸೆಕ್ರೆಟರಿಗಳು ಬ್ಯಾಗ್‌ಗಳನ್ನು ಹಿಡಿದುಕೊಂಡು ಹೋಗುವಂತಹ ಪರಿಸ್ಥಿತಿ ಇತ್ತು. ಇದು ಈಗಲೂ ಇದೆ. ಇದನ್ನು ಯಾವ ರೀತಿಯಾಗಿ ತೊಡೆದು ಹಾಕಬೇಕೆನ್ನುವಂಥಾದ್ದನ್ನು ನೀವು ಚಿಂತನೆ ಮಾಡಬೇಕೆಂದು ಹೇಳಿ ಮತ್ತೊಮ್ಮೆ ಇದನ್ನು ಸ್ವಾಗತ ಮಾಡುತ್ತೇನೆ. ತಮಗೆ ಕೊನೆಗಾದರೂ ಬುದ್ಧಿ ಬಂತಲ್ಲಾ ಎನ್ನುವಂಥ ವಿಚಾರವನ್ನು ಹರ್ಷಚಿತ್ತವಾಗಿ ಹೇಳಲಿಚ್ಛಿಸುತೇನೆ.

+ಶ್ರೀ ಡಿ.ಸಿ. ತಮ್ಮಣ್ಣ (ಕಿರಗಾವಲು): ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಸಲಹೆ ಇದೆ. ಮಾನ್ಯ ಕೆ. ಶ್ರೀನಿವಾಸಗೌಡರು, ಮಾನ್ಯ ಬಚ್ಚೇಗೌಡರು ಹಿಂದಿನ ಸರ್ಕಾರದಲ್ಲಿ ಗ್ರಾಮ ಪಂಚಾಯತ್

ಮತ್ತು ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ಸ್ಪರ್ಧಿಸುವಂತಹ ಅಭ್ಯರ್ಥಿಗಳು ಕಡ್ಡಾಯವಾಗಿ ಶೌಚಾಲಯವನ್ನು ಹೊಂದಿರಬೇಕೆಂದು ತಂದಿರುವಂಥಾದ್ದು ನಮ್ಮ ಸರ್ಕಾರವೆಂದು ಹೇಳಿದರು. ಅದು ಒಳ್ಳೆಯ ಕಾರ್ಯಕ್ರಮ ಅದನ್ನು ಈಗ ಅನುಷ್ಠಾನಕ್ಕೆ ತರುತ್ತಿದ್ದಿರೆಂದು ಈಗಾಗಲೇ ಹೇಳಿದ್ದಾರೆ. ಇದು ನಿಜವಾಗಲೂ ಸ್ವಾಗತಾರ್ಹವಾದಂತಹ ವಿಚಾರವಾಗಿದೆ. ಆದರೆ ನನ್ನದೊಂದು ಅನಿಸಿಕೆ ಏನೆಂದರೆ ಇನ್ನು ಒಂದು ವರ್ಷವಾದರೂ ಕೆಲವು ಕ್ಷೇತ್ರದಲ್ಲಿ ಇದನ್ನು ಅನುಷ್ಠಾನಕ್ಕೆ ತರುವುದಕ್ಕೆ ಆಗುವುದಿಲ್ಲ. ಏಕೆಂದರೆ ಹರಿಜನ ಗಿರಿಜನ ಮತ್ತು ಬಡ ಜನರು ಯಾರಿದ್ದಾರೆ ಈ ಚುನಾವಣೆಗಳಲ್ಲಿ ಸ್ಪರ್ಧಿಸುವವರು ಯಾರಿದ್ದಾರೆ. ಅವರಿಗೆ ಕೊಟ್ಟಿರುವಂತಹ ಸೈಟು 20-30 ಇದರಲ್ಲಿ ಶೌಚಾಲಯ 4-3 ಅಡಿಯಲ್ಲಿ ಕಟ್ಟಬಹುದು. ಅದಕ್ಕೆ ಅಂಡರ್ ಗ್ರೌಂಡ್, ಡ್ರೈನೇಜ ಸಿಸ್ಟಂ ಅನ್ನು ಹಳ್ಳಿಗಾಡುಗಳಲ್ಲಿ ಮಾಡಿದ್ದೇವೆ. ಅದಕ್ಕೆ ಸೆಪ್ಟಿಕ್‌ಪ್ಲಾಂಟ್ ಹಾಕಬೇಕು. ಸ್ಪೋರ್ ಫಿಟ್ ಹಾಕಬೇಕೆಂದರೆ 20 ಅಡಿ ಜಾಗ ಬೇಕು. ಈ ರೀತಿ ಇರುವಾಗ 20x30 ಅಡಿ ಸೈಟಿನಲ್ಲಿ ನಾವು ಕಡ್ಡಾಯವಾಗಿ ಶೌಚಾಲಯವನ್ನು ಕಟ್ಟುವುದಕ್ಕೆ ಸಾಧ್ಯವೇ? ಈಗ ಮಲ ಹೊರುವಂತಹ ಪದ್ಧತಿಯನ್ನು ನಾವು ರದ್ದು ಮಾಡಿದ್ದೇವೆ. ಇದು ನಮ್ಮ ರಾಜ್ಯದಲ್ಲಿ ಇಲ್ಲ. ಈಗ 4-3 ಅಡಿ ಶೌಚಾಲಯವನ್ನು ಕಟ್ಟಿ ಪುನಃ ಮಲ ಹೊರುವಂತಹ ಪದ್ದತಿಯನ್ನು ಜಾರಿಗೆ ತರುತ್ತೀರಾ? ಆದುದರಿಂದ ಇದಕ್ಕೆ ಬದಲಾಗಿ ಹಳ್ಳಿಗಾಡಿನಲ್ಲಿ ಸಾಮೂಹಿಕ ಶೌಚಾಲಯಗಳನ್ನು ಕಟ್ಟಿ ಯಾರು ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೋ ಅಂಥವರಿಗೆ ಉಪಯೋಗವಾಗಿ ಸಾಮೂಹಿಕ ಶೌಚಾಲಯಗಳನ್ನು ಕಟ್ಟುವಂತಹ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಈ ಸ್ಕೀಮ್ ಸಕ್ಸಸ್ ಆಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿ ಈ ಹರಿಜನರು, ಗಿರಿಜನರು ಮತ್ತು ಬಡಜನರು ಯಾರಿದ್ದಾರೆ ಅವರಿಗೆ ಕೊಟ್ಟಿರುವಂತಹ 20-30 ಸೈಟ್‌ನಲ್ಲಿ ಶೌಚಾಲಯಗಳನ್ನು ಕಟ್ಟುತ್ತೇವೆಂದರೆ ಆಗುವುದಿಲ್ಲ. ಅದಕ್ಕೆ ಅಂಡರ್‌ಗ್ರೌಂಡ್, ಡ್ರೈನೇಜ್ ಸಿಸ್ಟಂ ಕೊಡುವುದಕ್ಕೂ ಆಗುವುದಿಲ್ಲ. ಈ ದಿಶೆಯಲ್ಲಿ ಸರ್ಕಾರ ತೀವ್ರವಾದಂತಹ ಪ್ರಯತ್ನವನ್ನು ಮಾಡಬೇಕು. ಚಿಂತನೆ ಮಾಡಬೇಕು ಮತ್ತು ಹೇಗೆ ಪರಿಹರಿಸಬೇಕೆನ್ನುವಂತಹ ಚಿಂತನೆ ಮಾಡಬೇಕೆಂದು ನನ್ನ ಮನವಿಯಾಗಿದೆ.

+ಶ್ರೀ ಸಿ.ಭೈರೇಗೌಡ: (ವೇಮಗಲ್): ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಈ ಮಸೂದೆಯ ಮೇಲೆ ಮಾತನಾಡುವುದಕ್ಕಿಂತ ಹೆಚ್ಚಾಗಿ ಈ ಸದನದಲ್ಲಿ ಸರ್ಕಾರದ ವರ್ತನೆಯ ಬಗ್ಗೆ ಮಾತನಾಡುವಂಥಾದ್ದು ಅವಶ್ಯಕವಾಗಿದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಪರ ವಿರೋಧ, ಆಡಳಿತ ಪಕ್ಷ-ವಿರೋಧಪಕ್ಷ ಇಲ್ಲದೇ ಪ್ರಜಾಪ್ರಭುತ್ವ ಇರುವುದಕ್ಕೆ ಸಾಧ್ಯವಿಲ್ಲ. ಅದು ಇಲ್ಲದಿದ್ದರೆ ಪ್ರಜಾಪ್ರಭುತ್ವ ಎನಿಸಿಕೊಳ್ಳುವುದಿಲ್ಲ. ಮತ್ತೆ ಅಭಿಪ್ರಾಯ ಭೇದವಿರುವಂಥಾದ್ದು ಸ್ವಾಭಾವಿಕವಾಗಿದೆ. ಈ ಅಭಿಪ್ರಾಯ ಭೇದವಿಲ್ಲದೇ ಆಡಳಿತ ಪಕ್ಷ ವಿರೋಧ ಪಕ್ಷಗಳ ಅಭಿಪ್ರಾಯಗಳು ಒಂದೇ ಇರುವಂತಹ ಸಂದರ್ಭಗಳು ಅನೇಕ ಇವೆ. ಆದರೆ ಎಲ್ಲಾ ವಿಚಾರಗಳಲ್ಲೂ ಕೂಡ ಅಭಿಪ್ರಾಯ ಭೇದವಿರಲಾರದೆನ್ನುವಂತಹ ವ್ಯವಸ್ಥೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರೋಧ ಎನ್ನುವಂಥಾದ್ದನ್ನು ನಾನು ಬಹಳ ಸ್ಪಷ್ಟವಾಗಿ ಹೇಳಲಿಚ್ಛಿಸುತ್ತೇನೆ. ಅಧ್ಯಕ್ಷರೆ, ತಮಗೂ ಗೊತ್ತಿದೆ, ನಾವು ವಿರೋಧಪಕ್ಷದಲ್ಲಿ ಕುಳಿತಂಥಹ ಸಂದರ್ಭದಲ್ಲಿ ನಮ್ಮ ಅನಿಸಿಕೆಗಳನ್ನು ಹೇಳುವಂಥಾದ್ದು ನಮ್ಮ ಕರ್ತವ್ಯವೂ ಹೌದು, ಜವಾಬ್ದಾರಿಯೂ ಹೌದು, ಒಂದು ವೇಳೆ ನಾವು ಹೇಳಿದ್ದೆಲ್ಲಾ ಒಪ್ಪಬೇಕೆಂದು ಅಲ್ಲ. ನಾವು ಹೇಳಿದ್ದೇ ಕಾನೂನು ಆಗಬೇಕು. ನಾವು ಹೇಳಿದ ರೀತಿಯಲ್ಲಿ ಈ ಸದನದಲ್ಲಿ

ತೀರ್ಮಾನವಾಗಬೇಕೆಂದು ಇಲ್ಲ. ಅದು ಕೂಡ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದಂತಹ ಧೋರಣೆಯಾಗಿದೆ. ಈ ಹಿನ್ನೆಲೆಯಲ್ಲಿ ನಾನು ಆಗಲೇ ಹೇಳಿದ ಹಾಗೆ ಈ ಮಸೂದೆಗಿಂತ ಮತ್ತೊಂದು ಮಸೂದೆ ರಿಸರ್ವೇಷನ್ ಬಗ್ಗೆ ಮಾಡಿರುವಂತಹ ಮಸೂದೆ ಬಗ್ಗೆ ತೀವ್ರವಾದಂತಹ ಭಿನ್ನಾಭಿಪ್ರಾಯ ಇಲ್ಲಿ ಕುಳಿತಿರುವಂತಹವರಲ್ಲಿ ಈಗಲೂ ಇರುವಂಥಾದ್ದು ನಿಜ. ಅದನ್ನು ನಾವು ಈ ಬೆಲೆ ಮಂಡನೆ ಮಾಡಿದಂತಹ ಸಂದರ್ಭದಲ್ಲಿ ಚರ್ಚೆ ಮಾಡಬೇಕಾಗಿರುವಂಥಾದ್ದು ಅವಶ್ಯಕತೆ ಇದೆ. ಇದನ್ನು ನೀವು ಮಂಡನೆ ಮಾಡಬಾರದೆಂದು ವಿರೋಧ ವ್ಯಕ್ತ ಮಾಡಿದ್ದು ನಿಜ. ಅದು ನಮ್ಮ ಹಕ್ಕು ಇಲ್ಲಿ ಬರುವಂತಹ ಪ್ರಸ್ತಾವಗಳಿಗೆ ನಾವು ಯಾವ ರೀತಿ ತೀರ್ಮಾನ ಮಾಡುತ್ತೇವೆ. ಆ ತೀರ್ಮಾನದ ಪ್ರಕಾರ ನಮ್ಮ ನಡವಳಿಕೆಗಳನ್ನು ಮಾಡುವಂಥಾದ್ದು ನಮ್ಮ ಹಕ್ಕು. ಅದನ್ನು ಇವರು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿಲ್ಲ. ಅಂತಹ ಹಕ್ಕು ಇಲ್ಲಿ ಆಗುವುದಿಲ್ಲವೆಂದರೆ ಪ್ರಜಾಪ್ರಭುತ್ವದಲ್ಲಿ ಯಾವುದೇ ಸದನದಲ್ಲೂ ಆಗುವುದಿಲ್ಲ. ಇಡೀ ದೇಶದಲ್ಲೇ, ಅದು ಲೋಕಸಭೆ ಇರಬಹುದು,ರಾಜ್ಯ ಸಭೆ ಇರಬಹುದು, ಅದು ಪ್ರತಿಭಟನೆಯಾಗಿ ತಳೆಯುವಂಥಾದ್ದು ನಿಜ. ಮತ್ತೆ ಸದಸ್ಯರುಗಳು ಬಾವಿಗೆ ಬರುವಂಥಾದು ನಿಜ, ಹಾಗೆಯೇ ಸದನದಿಂದ ಹೊರಗೆ ಹೋಗುವಂಥಾದ್ದು, ಬಹಿಷ್ಕಾರ ಹಾಕುವಂಥಾದ್ದು, ವಾಕ್‌ಔಟ್ ಮಾಡುವಂಥಾದ್ದು ಇದೆ. ಇದೆಲ್ಲಾ ಮುಗಿದ ಮೇಲೆ ನಾವು ನಮ್ಮ ವ್ಯವಸ್ಥೆಯಲ್ಲಿ ರಾಜ್ಯಾಂಗ ತತ್ವ ಬಂದಿರುವಂಥಾದ್ದು. ಈ ರಾಜ್ಯದ ಅಧಿಪತಿಯಾಗಿರುವಂತಹ ರಾಜ್ಯಪಾಲರವರನ್ನು ಭೇಟಿಯಾಗಿ ಅವರಿಗೆ ನಮ್ಮ ಅಭಿಪ್ರಾಯಗಳನ್ನು ಏನೆಂಬ ಬಗ್ಗೆ ಸಲ್ಲಿಸಲು ಹೋಗಿದ್ದೇವೆ. ನಮ್ಮ ಮನವಿಗಳನ್ನು ಸಲ್ಲಿಸಲು ಹೋಗುವುದು ಒಂದು ಕ್ರಮ. ಇದು ಪ್ರಜಾಪ್ರಭುತ್ವದಲ್ಲಿ ಯಾವುದನ್ನು ನಾವು ವಿರುದ್ಧವಾಗಿ ಮಾಡಿಲ್ಲ. ಅಂತಹ ಯಾವುದೇ ಕೃತ್ಯವನ್ನು ನಾವು ಮಾಡಿಲ್ಲ. ಅದನ್ನೇ ಒಂದು ನೆಪವನ್ನಾಗಿ ಇಟ್ಟುಕೊಂಡು ನಮ್ಮನ್ನು ಇಲ್ಲಿ ಮೂದಲಿಸುವಂತಹ ರೀತಿಯಲ್ಲಿ, ಈ ಸಭೆಯ ಘನತೆ ಗೌರವಗಳಿಗೆ ಚ್ಯುತಿ ತರುವಂತಹ ರೀತಿಯಲ್ಲಿ ಈ ಸರ್ಕಾರದ ವರ್ತನೆ ಏನಿದೆ ಅದು ಖಂಡನೀಯ. ಪ್ರಜಾಪ್ರಭುತ್ವದ ವಿರೋಧಿ ನೀತಿ ಇವರಿಗೆ ಬಹುಮತವಿದೆ ಎನ್ನುವ ಒಂದೇ ಒಂದು ಕಾರಣದಿಂದ ನಮ್ಮನ್ನು ಮೂದಲಿಸುವಂತಹ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಮಂತ್ರಿಗಳು, ಸಂಸದೀಯ ವ್ಯವಹಾರ ಮಂತ್ರಿಯವರು, ನೀವು ರಾಜಭವನಕ್ಕೆ ಹೋದಿರಿ ಎಂದು ನಮಗೆ ಹೇಳುತ್ತಾರೆ. ನಾವು ಯಾವ ರೀತಿಯ ರಾಜ್ಯಾಂಗ ವಿರೋಧಿ ಕೆಲಸವನ್ನು ಮಾಡಿದ್ದೇವೆಯೇ? ನಾವು ರಾಜ ಭವನಕ್ಕೆ ಹೋಗಬಾರದು, ರಾಜ್ಯಪಾಲರಿಗೆ ಮನವಿಯನ್ನು ಸಲ್ಲಿಸಬಾರದು ಎಂದು ಯಾವ ರಾಜ್ಯಾಂಗದಲ್ಲಿ ಇದೆ? ಪ್ರತಿನಿತ್ಯ ಮಾತೆತ್ತಿದರೆ ಮೂದಲಿಸುವಂತಹ ರೀತಿಯಲ್ಲಿ ವರ್ತನೆ ಮಾಡಿದರೆ ಸರ್ಕಾರಕ್ಕೆ ನಾವು ಏನು ಹೇಳಬೇಕು. ಇದು ಪ್ರಜಾಪ್ರಭುತ್ವ ವಿರೋಧಿ ನೀತಿ, ಇವರ ವಿರುದ್ಧ ವರ್ತನೆಯನ್ನು ತೋರಿಸುವಂಥಾದ್ದು ಎದ್ದು ಕಾಣುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಭೈರೇಗೌಡರು ಬಹಳ ಆವೇಶಭರಿತವಾಗಿ ಮಾತನಾಡುತ್ತಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳೋಣ. very spirited speech he is giving. ಬಹಳ ಸಂತೋಷ. ತಾವು ಒಂದು ಕೆಲಸವನ್ನು ಮಾಡಬಹುದಾಗಿತ್ತು. ಇಲ್ಲಿ ಚರ್ಚೆ ಮಾಡಿ, ಅದಾದ ಮೇಲೆ ಸರ್ಕಾರ ಒಪ್ಪದೇ ಇದ್ದಾಗ ನೀವು ಮುಂದೆ ರಾಜಭವನಕ್ಕೆ ಹೋಗುವಂಥಾದ್ದು, ಆದರೆ ನೀವು ಅಲ್ಲಿಗೆ ಹೋಗಿದ್ದೆ ತಪ್ಪು, ಹೋಗಬಾರದಿತ್ತು, ಎಂದಲ್ಲ.

ಪ್ರಜಾಪ್ರಭುತ್ವದಲ್ಲಿ ಸರ್ಕಾರ ಕೇಳದೇ ಇದ್ದಾಗ ನೀವು ಮುಂದೆ ರಾಜ್ಯಪಾಲರ ಹತ್ತಿರ ಹೋಗಿ ಮನವಿಯನ್ನು ಕೊಡುವಂಥಾದ್ದು. ಹೀಗೆ ಅನ್ಯಾಯವನ್ನು ಮಾಡುತ್ತಾರೆಂದು ಹೇಳುವಂಥಾದ್ದನ್ನು ನಾವೂ ಮಾಡಿದ್ದೇವೆ. ತಾವು ಈಗ ಅದನ್ನೇ ಮಾಡುತ್ತಿದ್ದೀರಿ. ಹೋದ ಸಲ ಲ್ಯಾಂಡ್ ರಿಫಾರ್ಮ್ಸ್ ಬಿಲ್ ಬಂದಂತಹ ಸಂದರ್ಭದಲ್ಲಿ ನಾವು ಚರ್ಚೆ ಮಾಡಿದ್ದೇವೆ. ಕೇಳಿದ್ದೇವೆ, ಹೇಳಿದ್ದೇವೆ ಕೊನೆಗೆ ನಾವು ಧರಣಿಯನ್ನು ಮಾಡಿದ್ದೇವೆ.

ಕೊನೆಗೆ ಗವರ್ನರ್ ಬಳಿ ಹೋದೆವು. ತಾವೂ ಕೂಡ ಅದೇ ರೀತಿಯಾಗಿ, ಚರ್ಚೆ ಮಾಡಿದ ಮೇಲೆ ಕೊನೆಗೆ ಅಲ್ಲಿಗೆ ಹೋಗಿದ್ದರೆ ಒಳ್ಳೆಯದಿತ್ತು. ಆದರೆ ಸಡನ್ನಾಗಿ ಚರ್ಚೆಯನ್ನು ಬಿಟ್ಟು ಅಲ್ಲಿಗೆ ಹೋದಿರಿ. ಇದು ಒಂದೇ ವ್ಯತ್ಯಾಸ.

ಶ್ರೀ ಸಿ. ಭೈರೇಗೌಡ: ಮಾನ್ಯ ಅಧ್ಯಕ್ಷರೇ, ಅವರು ಈ ರೀತಿ ಮಾಡಿದರು, ನಾವು ಈ ರೀತಿ ಮಾಡಿದ್ದೇವೆ ಎಂದು ನಮಗೆ ಪಾಠ ಹೇಳಲು ಬಂದಿದ್ದೀರಲ್ಲ ಸ್ವಾಮಿ. ತಾವು ಇಲ್ಲಿ ನಿಂತು ಏನೇನು ಮಾತನಾಡಿದ್ದೀರಿ ಎಂದು ನಿಮ್ಮ ಮಾತುಗಳನ್ನೇ ನಾವು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇವೆ. ಹಾಗಾದರೆ ಅವುಗಳನ್ನೆಲ್ಲಾ ಒಪ್ಪಿಕೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ವಿರೋಧ ಪಕ್ಷದ ನಾಯಕರಾಗಿ ಹೇಳಿರುವುದನ್ನು ಒಪ್ಪಿಕೊಳ್ಳುವ ಸಂದರ್ಭ ಬಂದಾಗ ನೋಡೋಣ. ಆದರೆ ನೀವೂ ಚರ್ಚೆಯನ್ನು ಮಾಡಬಹುದಾಗಿತ್ತಲ್ಲ ಎಂದು ಹೇಳುತ್ತಿದ್ದೇನೆ.

ಶ್ರೀ ಸಿ. ಭೈರೇಗೌಡ: ನೀವು ಈಗ ಈ ಮಾತನ್ನು ಹೇಳುತ್ತಿದ್ದೀರಿ. ನೀವು ವಿರೋಧ ಪಕ್ಷದ ನಾಯಕರಾಗಿ ಇಲ್ಲಿ ನಿಂತು ಮಾತನಾಡಿರತಕ್ಕಂಥಾದ್ದಕ್ಕೆ ನಾವು ಪ್ರತಿನಿತ್ಯ, ಪ್ರತಿ ನಿಮಿಷವೂ ಕೂಡ ತಮಗೆ ಕನ್ನಡಿ ಹಿಡಿಯತಕ್ಕಂಥ ಕೆಲಸ ಮಾಡುತ್ತೇವೆ. ಹಿಂದೆ ಭೂ ಸುಧಾರಣಾ ಮಸೂದೆಯ ವಿಚಾರದಲ್ಲಿ ಚರ್ಚೆಯಾದ ಮೇಲೆ, ಇಲ್ಲಿ ಒಪ್ಪಿಗೆಯಾಗದಿದ್ದಾಗ ನಾವು ಮಾನ್ಯ ರಾಜ್ಯಪಾಲರ ಹತ್ತಿರ ಹೋದೆವು ಎಂದು ತಾವು ಹೇಳಿದಿರಿ. ನಾವು ಪ್ರಾರಂಭದಲ್ಲೇ ಹೋದೆವು. ನಿಮಗೂ ನಮಗೂ ವ್ಯತ್ಯಾಸ ಇರತಕ್ಕಂಥಾದ್ದು ಅದೇ. ತಾವು ಪ್ರಾರಂಭದಲ್ಲೇ ಹೋದಿರಿ. ನಾವು ನಂತರ ಹೋದೆವು ಎನ್ನತಕ್ಕಂಥಾದ್ದನ್ನು ತಾವು ಹೇಳಿದಿರಿ. ಅದನ್ನು ಒಪ್ಪಿಕೊಳ್ಳೋಣ. ನಾವು ಅಲ್ಲಿಗೆ ನಂತರವಾಗಲೀ ಅಥವಾ ಪ್ರಾರಂಭದಲ್ಲಾಗಲೀ ಹೋಗಬಾರದು ಎಂದೇನೂ ಇಲ್ಲ. ನಿಮ್ಮ ಮಾತನ್ನು ಪುನಃ ನಿಮಗೆ ಹೇಳುವುದಾದರೆ ನೀವು ಏನೇನು ಹೇಳಿದ್ದೀರಿ. ಅದೆಲ್ಲವನ್ನೂ ಕೂಡ ತಮ್ಮ ಮುಂದೆ ಇಡುತ್ತೇವೆ. ಈಗ ಅದನ್ನು ಒಪ್ಪಿಕೊಳ್ಳುತ್ತೀರಾ? ದಯವಿಟ್ಟು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬಂದರೆ ನೋಡೋಣ.

ಶ್ರೀ ಸಿ. ಭೈರೇಗೌಡ: ಬಂದರೆ ನೋಡೋಣ ಎಂದು ಈಗ ಹೇಳುತ್ತಿದ್ದೀರಿ. ಈ ಮಸೂದೆಯ ವಿಚಾರದಲ್ಲಿ ಸರ್ಕಾರ ನಡೆದುಕೊಂಡಂಥ ಧೋರಣೆ ಬಗ್ಗೆ ಹೇಳುವುದಾದರೆ, ತಾವು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದೀರಿ ಅದನ್ನು ತಮಗೇ ಓದಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಖರ್ಗೆಯವರು ದಯವಿಟ್ಟು ಕೇಳಬೇಕು. ಈ ವರ್ಷದ ರಾಜ್ಯಪಾಲರ ಭಾಷಣದ 32ನೇ ಕಂಡಿಕೆಯಲ್ಲಿ;

"ಕಳೆದ ಶತಮಾನದಲ್ಲಿದ್ದ ಆಡಳಿತದ ಪರಿಕಲ್ಪನೆ ಕ್ರಮೇಣ ಬದಲಾಗುತ್ತಾ ಬಂದಿದೆ. ಲಕ್ಷಾಂತರ ಜನರ ಭವಿಷ್ಯವನ್ನು ಗಣ್ಯವರ್ಗವು ನಿಯಂತ್ರಿಸುವ ಕಾಲ ಹೋಯಿತು. ಹಿಂದೆ ಸರ್ಕಾರವು ಒಂದು ನಿಯಂತ್ರಣ ಸಂಸ್ಥೆಯಾಗಿ ಕೆಲಸ ಮಾಡುತ್ತಿತ್ತು. ಈ ಸಹಸ್ರಮಾನದ ಪ್ರಾರಂಭದಲ್ಲಿ, ಸರ್ಕಾರವು ಬದಲಾವಣೆ ಮತ್ತು ಪ್ರಗತಿಯ ಚಾಲಕ ಶಕ್ತಿಯೆಂಬ ವ್ಯಾಖ್ಯಾನ ನೀಡಲಾಗುತ್ತಿದೆ...."

ಎನ್ನತಕ್ಕಂಥಾದ್ದನ್ನು ಮಾನ್ಯ ರಾಜ್ಯಪಾಲರ ಮೂಲಕ ಅಪ್ಪಣೆ ಕೊಡಿಸಿದ್ದಾರೆ. ಆದರೆ, ಎಲ್ಲೆಲ್ಲಿ ತಮಗೆ ಹೆಚ್ಚಿನ ಅಧಿಕಾರ ಪಡೆದುಕೊಳ್ಳಲು ಸಾಧ್ಯವಿದೆ, ಪರಮಾಧಿಕಾರವನ್ನು ಪಡೆದುಕೊಳ್ಳಲು ಸಾಧ್ಯವಿದೆ ಅದೆಲ್ಲವನ್ನೂ ಕೂಡ ನೀವು ಹೇಳಿರತಕ್ಕಂಥ ಮಾತಿಗೆ ವಿರುದ್ಧವಾಗಿ ಮಾಡುತ್ತಿದ್ದೀರಿ. ರಾಜ್ಯದ ಚುನಾವಣಾ ಆಯೋಗಕ್ಕೆ ಇದ್ದಂಥ ಕಾನೂನನ್ನು ಸರ್ಕಾರ ಪಡೆದುಕೊಳ್ಳುವಂಥ ಪ್ರಯತ್ನ ಮಾಡಿದೆ. ತಾವು ಬಾಯಿಯಲ್ಲಿ ಹೇಳತಕ್ಕಂಥಾದ್ದು ಒಂದು, ಮಾಡತಕ್ಕಂಥಾದ್ದು ಒಂದು. ಈ ಮಸೂದೆಗೆ, ನಿಮ್ಮ ಬೆನ್ನ ಹಿಂದೆ, ನಾವು ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ನೀವು ಈ ಸದನದ ಒಪ್ಪಿಗೆಯನ್ನು ಪಡೆದಿದ್ದೀರಲ್ಲ. ಇದು ಎಷ್ಟರಮಟ್ಟಿಗೆ ಸಾಧುವಾದುದು? ಇಲ್ಲಿ ರಾಜ್ಯಪಾಲರಿಂದ ಹೇಳಿಸಿರುವುದಕ್ಕೂ, ನೀವು ಉಪದೇಶ ಮಾಡಿರತಕ್ಕಂಥ ತತ್ವಕ್ಕೂ, ನೀವು ಅನುಸರಿಸತಕ್ಕಂಥ ಕಾರ್ಯ ನೀತಿಗೂ ಯಾವ ರೀತಿಯಾದಂಥ ಸಂಬಂಧವಿದೆ ಎನ್ನುವುದಕ್ಕೆ ನೀವು ಒಂದು ಸಾರಿ ನಿಮ್ಮ ಎದೆ ಮುಟ್ಟಿಕೊಂಡು ಆಲೋಚನೆ ಮಾಡಿ ನೋಡಿ. ಹೌದು, ನಮಗೆ ಸ್ವಾತಂತ್ರ್ಯ ಇದೆ. ನಾನು ಪುನಃ ಅದೆಲ್ಲವನ್ನೂ ಹೇಳುವುದಕ್ಕೆ, ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನೀವು ಹೇಳಿರತಕ್ಕಂಥ ಮಾತಿಗೂ, ನೀವು ಬೋಧನೆ ಮಾಡಿರತಕ್ಕಂಥ ವಿಚಾರಕ್ಕೂ ಮತ್ತು ನೀವು ನಡೆದುಕೊಳ್ಳತಕ್ಕಂಥ ವರ್ತನೆಗೂ ಎಷ್ಟು ವ್ಯತ್ಯಾಸವಿದೆ ಎನ್ನುವುದನ್ನು ಇದು ತೋರಿಸಿಕೊಡುತ್ತದೆ. ನಿಮಗೆ ಗತ್ಯಂತರವಿಲ್ಲದೆ ಇದಕ್ಕೆ ಒಪ್ಪಿದ್ದೀರಿ ಎಂದು ಹೇಳುತ್ತೇನೆ. ಅಲ್ಲಿಗೆ ಹೋಗಿ ಛೀಮಾರಿ ಹಾಕಿಸಿಕೊಂಡು ಬಂದಿದ್ದೀರಿ. ಇದನ್ನು ಪಾಸ್ ಮಾಡಿಕೊಳ್ಳಿ ಸ್ವಾಮಿ, ಬೇಡ ಅಂದವರು ಯಾರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾವು ಒಳ್ಳೆಯ ಸಲಹೆಯನ್ನು ಎಪ್ಪಿಕೊಂಡರೆ ಛೀಮಾರಿ ಹಾಕಿಸಿಕೊಂಡು ಬಂದ ಹಾಗೆಯೇ? ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರು ತರುವಂಥ ಯಾವುದೇ ಒಂದು ತಿದ್ದುಪಡಿ,, ಸಲಹೆಯನ್ನು ಒಪ್ಪಿಕೊಂಡು ಸರ್ಕಾರ ಅದನ್ನು ಅನುಷ್ಠಾನಕ್ಕೆ ತಂದರೆ ಅದು ನಮ್ಮ ವೀಕ್‌ನೆಸ್ ಅಥವಾ ಛೀಮಾರಿ ಹಾಕಿಸಿಕೊಂಡಂತೆ ಎಂದು ಹೇಳುವುದೇ ಸರಿಯೇ?

ಶ್ರೀ ಕೆ. ಶ್ರೀನಿವಾಸಗೌಡ: (ಕುದವನಹಳ್ಳಿ): ಅದನ್ನು ಇಲ್ಲೇ ಹೇಳಿದ್ದೆವಲ್ಲ. ಇಲ್ಲೇ ಒಪ್ಪಿಕೊಳ್ಳಬಹುದಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನೀವು ಅಮೆಂಡ್‌ಮೆಂಟ್ ಕಳುಹಿಸಿರಲಿಲ್ಲ. ನೀವು ಈ ಬಿಲ್ಲ್‌ಗೆ ಅಮೆಂಡ್‌ಮೆಂಟ್ ತರದಿದ್ದರೆ ನಾವೇನು ಮಾಡುವುದು.

ಶ್ರೀ ಕೆ. ಶ್ರೀನಿವಾಸಗೌಡ (ಕುದವನಹಳ್ಳಿ): ಅಲ್ಲಿ ಪಾಸ್ ಮಾಡಿಸಿಕೊಳ್ಳಲು ನಿಮ್ಮ ಕೈಯ್ಯಲ್ಲಿ ಆಗಲಿಲ್ಲ ಎಂದೇ ನೀವು ಇದನ್ನು ಒಪ್ಪಿಕೊಂಡು ಬಂದಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅಮೆಂಡ್‌ಮೆಂಟನ್ನು ಮೊದಲು ನೀವೇ ತಂದಿದ್ದರೆ ಒಪ್ಪಿಕೊಳ್ಳುತ್ತಿದ್ದೆವು.

ಶ್ರೀ ಆರಗ ಜ್ಞಾನೇಂದ್ರ: ನೀವು ಗಟ್ಟಿ ಇದ್ದರೆ ರೊಟ್ಟಿ ಮಾಡಿತ್ತೀರಿ. ತೆಳ್ಳಗಿದ್ದರೆ ದೋಸೆ ಅರೆಯುತ್ತೀರಿ. ಇಲ್ಲಿ ನಿಮ್ಮದು ಮೆಜಾರಿಟಿ ಇತ್ತು. ಅದಕ್ಕೇ ಹಾಗೆ ಮಾಡಿದಿರಿ. ಈಗ ಅಲ್ಲಿರುವವರು ಬಹಳ ಸಜ್ಜನರು. ಒಳ್ಳೆಯವರು ಎಂದು ಇಲ್ಲಿ ಬಂದು ಹೊಗಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಇನ್ನೊಂದು ತಿಂಗಳಲ್ಲಿ ಮೇಲ್ಮನೆಯಲ್ಲಿ ಮತ್ತೆ ನಾವು ಮೆಜಾರಿಟಿಗೆ ಬರುತ್ತೇವೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ಇದರಲ್ಲಿ ಮೆಜಾರಿಟಿ, ಮೈನಾರಿಟಿ ಪ್ರಶ್ನೆ ಇಲ್ಲ ಎಂದು ನಾನು ವಿನಯಪೂರ್ವಕವಾಗಿ ಹೇಳಲು ಇಷ್ಟಪಡುತ್ತೇನೆ. 'ಗತ್ಯಂತರವಿಲ್ಲದೇ' ಎಂದು ತಾವು ಹೇಳಿದ್ದೀರಿ. ಅದು ಸರಿಯಾದಂಥ ಮಾತಲ್ಲ. ಏಕೆಂದರೆ ಅಲ್ಲಿ ಅವರು ಇದನ್ನು ಸೋಲಿಸಿದ್ದರೂ ಕೂಡ ಪುನಃ ಇಲ್ಲಿ ಬಂದಾಗ ನಾವು ನಮ್ಮ ಸಂಖ್ಯಾ ಬಲ ಉಪಯೋಗಿಸಿ ಪಾಸ್ ಮಾಡಿ, ಅದು ಪುನಃ ಅಲ್ಲಿಗೆ ಹೋಗುತ್ತಿತ್ತು. ಈಗ ಒಂದು ಸ್ಟೆಪ್ ತಪ್ಪಿದೆ. ಈಗ ಇಲ್ಲಿ ಪಾಸ್ ಆದರೆ ಪುನಃ ಅಲ್ಲಿಗೆ ಹೋಗುವ ಅವಶ್ಯಕತೆ ಇಲ್ಲ. ಆದಕಾರಣ ಸಂಖ್ಯಾಬಲದ ದೃಷ್ಟಿಯಿಂದ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ನಮಗೆ ಸಂಖ್ಯಾಬಲ ಇದೆ. ಇದು ಮೂರನೇ ಸಲವು ಪಾಸ್ ಆಗುತ್ತದೆ. ಆದರೆ ಇದನ್ನು ನಾವು ಒಂದು ಒಳ್ಳೆಯ ಸತ್ಸಂಪ್ರದಾಯ ಮಾಡುವ ದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಅನಿವಾರ್ಯ ಅಥವಾ ಅಲ್ಲಿ ಸಂಖ್ಯಾಬಲ ಇಲ್ಲ ಎಂದು ಮಾಡಿರತಕ್ಕಂಥಾದ್ದಲ್ಲ. ಎರಡನೆಯದು, ರಿಸರ್ವೇಷನ್ಸ್ ಬಗ್ಗೆ ಬಂದಾಗ ವರ್ತನೆ ಬಗ್ಗೆ ತಾವು ಮಾತನಾಡಿದಿರಿ. ನಾನು ಆದೇ ಧಾಟಿಯಲ್ಲಿ ಮಾತನಾಡಲು ಇಷ್ಟಪಡುವುದಿಲ್ಲ. ರಿಸರ್ವೇಷನ್ ಬಗ್ಗೆ ಇಲ್ಲಿ ಬಂದಾಗ, ಚರ್ಚೆ ಮಾಡುವುದಕ್ಕೆ ಸಾಕಷ್ಟು ಅವಕಾಶಗಳಿದ್ದರೂ ಕೂಡ, ತಾವು ಬಾವಿಗೆ ಬಂದಿರಿ, ಚರ್ಚೆ ಮಾಡಲಿಲ್ಲ. ಗವರ್ನರ್ ಬಳಿಗೆ ಹೋದಿರಿ. ಗವರ್ನರ್ ಹತ್ತಿರ ಹೋಗುವುದು ತಮ್ಮ ಹಕ್ಕು. ಅದು ಪ್ರಜಾಪ್ರಭುತ್ವದ ವಿರುದ್ಧ ಎಂದು ನಾನು ಹೇಳಲು ಇಷ್ಟಪಡುವುದಿಲ್ಲ. ಆದರೆ ಅದರ ಪರಿಣಾಮ ಏನಾಯಿತು? ನಾವು ಮಾಡಿರತಕ್ಕಂಥ ಬಿಲ್ಲನ್ನು ಗವರ್ನರ್ ತಕ್ಷಣ ಪಾಸ್ ಮಾಡಿಕೊಟ್ಟರು. ಅದರ ಅರ್ಥ ಏನೆಂದರೆ, ನಾವು ಕಾನೂನುಬದ್ಧವಾಗಿ ಮಾಡಿರತಕ್ಕಂಥ ಒಂದು ಬಿಲ್‌ಅನ್ನು ಗವರ್ನರ್ ಪಾಸ್ ಮಾಡಿದರು. ಅವರು ಕಾನೂನು ಪಂಡಿತರು, ಅಪಾರ ಅನುಭವ ಪಡೆದಿರತಕ್ಕಂಥವರು. ನಾವು ಅಲ್ಲಿಗೆ ಹೋದ ತಕ್ಷಣ ಯಾವುದು ಕಾನೂನುಬದ್ಧವಾಗಿದೆ ಅದನ್ನು ಪಾಸ್ ಮಾಡಿಕೊಡುವುದಿಲ್ಲ ಎನ್ನುವ ಮಾತನ್ನು ಗವರ್ನರ್ ಹೇಳಲಿಲ್ಲ. ತಕ್ಷಣ ಮಾಡಿಕೊಟ್ಟರು. ಆರ್ಡಿನೆನ್ಸ್‌ಅನ್ನೂ ತಕ್ಷಣ ಮಾಡಿಕೊಟ್ಟರು. ಈ ಬಿಲ್‌ಅನ್ನು ತಕ್ಷಣ ಮಾಡಿಕೊಟ್ಟರು. ನೀವು ಹೋಗಿ ಏನು ಪ್ರಯೋಜನವಾಯಿತು?

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೇ, ಪುನಃ ಏನು ಪ್ರಯೋಜನವಾಯಿತು ಎಂದು ಹೇಳುತ್ತಿದ್ದಾರೆ. ಹಾಗಾದರೆ ನಾವು ಇಲ್ಲಿ ಕುಳಿತುಕೊಳ್ಳುವುದೇನೂ ಬೇಕಾಗಿಲ್ಲ. ನಾವು ಹೋಗುತ್ತೇವೆ. ತಾವು ಪಾಸ್ ಮಾಡಿಕೊಳ್ಳಿ. ಪುನಃ ಪುನಃ ಅದೇ ಮಾತು. ಅದೇ ರೀತಿಯಾದಂಥ ಧೋರಣೆಯನ್ನು ನೀವು ಅನುಸರಿಸುವುದಾದರೆ, ನೀವು ಇಷ್ಟೆಲ್ಲಾ ಮಾಡಿ, ರಾಜ್ಯಪಾಲರ ಹತ್ತಿರ ಹೋಗಿದ್ದಕ್ಕೆ

ಏನು ಪ್ರಯೋಜನವಾಯಿತು. ನಮ್ಮ ಬಿಲ್‌ಅನ್ನು ತಕ್ಷಣ ಮಾಡಿ ಕೊಟ್ಟರು. ನೀವು ಏಕೆ ಹೋದಿರಿ ಎಂದು ಹೇಳುವುದಾದರೆ, ನಾವು ಇಲ್ಲಿ ಇರಬೇಕಾಗಿರತಕ್ಕಂಥ ಅವಶ್ಯಕತೆ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಅಷ್ಟು ಲೋ ಪ್ರೊಫೈಲ್‌ಆಗಿ ಮಾತನಾಡಬೇಡಿ.

ಶ್ರೀ ಆರಗ ಜ್ಞಾನೇಂದ್ರ: ಆ ಮನೆಯಲ್ಲಿ ನೀವು ಈ ಧ್ವನಿಯಲ್ಲಿ ಮಾತನಾಡಲಿಲ್ಲ. ಈ ಮನೆಯಲ್ಲಿ ಪದೇ ಪದೇ ಅದೇ ಧೋರಣೆ ಏನೂ ವ್ಯತ್ಯಾಸವಾಗಿಲ್ಲ.

ಶ್ರೀ ಎಂ.ವೈ. ಘೋರ್ಪಡೆ: ದಯವಿಟ್ಟು ನೀವು ಮನಸ್ಸಿಗೆ ತೊಂದರೆ ಮಾಡಿಕೊಳ್ಳಬೇಡಿ. ಅದು ನನ್ನ ಉದ್ದೇಶವಲ್ಲ. ವರ್ತನೆ ಎನ್ನುವ ಮಾತು ಹೇಳಿದ್ದಕ್ಕೇ ನಾನು ಹೇಳಿದೆ. ಆ ಕಾಲಕ್ಕೆ ವರ್ತನೆಯ ಧಾಟಿ ಸಾಮರಸ್ಯ ಮೂಡುವಂತಿರಲಿಲ್ಲ. ಆ ಸಂದರ್ಭದಲ್ಲಿ ನಾನು ಅದನ್ನು ಮಂಡಿಸಲು ಮೂರು ದಿನ ಕಾದಿದ್ದೆ. ತಾವು ಅವಕಾಶ ಕೊಡಲಿಲ್ಲ. ಅದಕ್ಕೋಸ್ಕರ ನಾವು ಅದನ್ನು ಸಂಖ್ಯಾ ಬಲ ಉಪಯೋಗಿಸಿ ಪಾಸ್ ಮಾಡಿಸಿದೆವು. ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆಯಿಲ್ಲ. ವೈಯಕ್ತಿಕವಾಗಿ ನನಗೇನೂ ಬರುವುದಿಲ್ಲ. ಆದರೆ ಕರ್ನಾಟಕ ರಾಜ್ಯದಲ್ಲಿ ಸಕಾಲದಲ್ಲಿ ಚುನಾವಣೆಗಳಾಗಬೇಕು ಎನ್ನುವ ಏಕೈಕ ಉದ್ದೇಶದಿಂದ ಇದನ್ನು ಮಾಡಬೇಕಾಯಿತು. ಅವರ ಅಭಿಪ್ರಾಯದಂತೆ, ನಾವು ಇದನ್ನು ಅವಸರದಿಂದ ಪಾಸ್ ಮಾಡಿಸಿದೆವು ಎಂದು ಇಟ್ಟುಕೊಂಡರೂ, ಈ ಅವಸರವನ್ನು ಎಲೆಕ್ಷನ್‌ಗೋಸ್ಕರ ಮಾಡಿರತಕ್ಕಂಥಾದ್ದು ಎಂದು ಹೇಳಲು ನಾನು ಇಷ್ಟಪಡುತ್ತೇನೆ. ಇವತ್ತು ನಾವು ಸರ್ಕಾರ ಮಾಡುವ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಿದ್ದೇವೆ. ನಾವು ರಿಸರ್ವೇಷನ್ ಕೆಲಸ ಮುಗಿಸಿದ ನಂತರ ಆರು ವಾರ ಬೇಕು ಎಂದು ಎಲೆಕ್ಷನ್ ಕಮೀಷನ್‌ನವರು ಹೇಳಿದ್ದಾರೆ. ಲೆಕ್ಕ ಹಾಕಿದರೆ ಜೂನ್ ಒಂದನೇ ತಾರೀಖು ಆದನಂತರ ಎಲೆಕ್ಷನ್ ಮಾಡಲು ಯಾವ ತೊಂದರೆಯೂ ಉಂಟಾಗುವುದಿಲ್ಲ. ಇ ಹೇಗೆ ಸಾಧ್ಯವಾಯಿತು ಎಂದರೆ, ಸರ್ಕಾರ ಇದರ ಬಗ್ಗೆ ಆಸಕ್ತಿ ತೋರಿಸಿ, ತಮ್ಮ ಸಂಖ್ಯಾ ಬಲವನ್ನೂ ಕೂಡ ಉಪಯೋಗಿಸಿ ಮಾಡಿದ್ದಕ್ಕೆ ಆಯಿತು. ಇಲ್ಲದಿದ್ದರೆ ಎಲೆಕ್ಷನ್ ಮಾಡಲು ಆಗುತ್ತಿರಲಿಲ್ಲ. ಮತ್ತು ಕರ್ನಾಟಕಕ್ಕೆ ಇರುವಂಥ ಒಳ್ಳೆಯ ಹೆಸರಿಗೆ ತೊಂದರೆ ಮಾಡಿದಂತೆ ಆಗುತ್ತಿತ್ತು.

ಅದಕ್ಕಾಗಿ ಹೇಳುತ್ತಿದ್ದೇನೆ. ನಿಮ್ಮ ಮನಸ್ಸಿಗೆ ತೊಂದರೆ ಉಂಟು ಮಾಡುವ ದೃಷ್ಟಿಯಿಂದ ನಾನು ಹೇಳಲಿಲ್ಲ. ಆ ಉದ್ದೇಶ ನಮ್ಮ ಮನಸ್ಸಿನಲ್ಲಿ ಯಾವಾಗಲೂ ಇರಲಿಲ್ಲ. ಮುಂದೆ ಕೂಡ ಇರುವುದಿಲ್ಲ. ಇದರಲ್ಲಿ ಅವಸರ ಮಾಡುವ ಕಾರಣವೆಂದರೆ, ಆರ್ಡಿನೆನ್ಸ್ ಸಕಾಲಕ್ಕೆ ಪಾಸ್ ಮಾಡದೇ ಇದ್ದರೆ ಅದು ಲ್ಯಾಪ್ಸ್ ಆಗುತ್ತದೆ. ಪಾಸ್ ಮಾಡಿದರೆ ನಾಳೆ ನಾವು ಅದನ್ನು ಗವರ್ನರ್‌ಗೆ ಕಳುಹಿಸುತ್ತೇವೆ. ಇಲ್ಲದಿದ್ದರೆ ಎರಡನೇ ತಾರೀಖಿಗೆ ಅದನ್ನು ನೋಟಿಫಿಕೇಷನ್ ಮಾಡಲು ಆಗುವುದಿಲ್ಲ. ಇದು ಇದರಲ್ಲಿರತಕ್ಕಂಥ ವಾದ. ಮೇಲಿನ ಮನೆಯಲ್ಲಿ ಈ ತಿದ್ದುಪಡಿಯನ್ನು ಒಪ್ಪಿದ್ದೀರಿ. ನಾವು ಹೇಳಿದ್ದನ್ನೂ ಒಪ್ಪಬೇಕು ಎಂದು ತಾವು ಹೇಳಿದಿರಿ. ಮತ್ತು ಎರಡು ಲಕ್ಷ ಇರುವುದನ್ನು ಮೂರು ಲಕ್ಷ ಮಾಡಬೇಕು ಎಂದೂ ಹೇಳಿದಿರಿ. ತಮಗೆ ಗೊತ್ತಿದೆ. ತಮ್ಮ ಸರ್ಕಾರವಿದ್ದಾಗ ಒಂದು ಲಕ್ಷ ಇದ್ದುದನ್ನು ಎರಡು ಲಕ್ಷ ಮಾಡುತ್ತೇವೆ ಎಂದು ಹೇಳಿದಿರಿ. ಆಮೇಲೆ ಒಂದು ಲಕ್ಷದ ಐವತ್ತು ಸಾವಿರ ಮಾಡುತ್ತೇವೆ ಎಂದು ಹೇಳಿದಿರಿ. ಅದನ್ನೂ ಮಾಡಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಒಂದು ಲಕ್ಷದಿಂದ ಎರಡು ಲಕ್ಷ ಮಾಡಿದ್ದೇವೆ. ಇದು ಸಣ್ಣ

ಮಾತಲ್ಲ. 5,600 ಪಂಚಾಯಿತಿಗಳಿಗೆ ಒಂದು ಲಕ್ಷವೆಂದರೆ 56 ಕೋಟಿಯಾಗುತ್ತದೆ. ಒಂದು ಲಕ್ಷದಿಂದ ಎರಡು ಲಕ್ಷಕ್ಕೆ ನಾವು ಏರಿಸಿದ್ದೇವೆ ಎಂದರೆ ಅದು 112 ಕೋಟಿಯಾಗುತ್ತದೆ. ಈ ಪಂಚಾಯಿತಿಗಳ ಬೇಸಿಕ್ ನೀಡ್ಸ್ ನೋಡಿಕೊಳ್ಳಲು, ಅಂದರೆ ವಾಟರ್ ಬಿಲ್ ಇಂಥವುಗಳನ್ನು ಕಟ್ಟಲು ಉಪಯೋಗವಾಗಲಿ ಎಂದು ನಾವು ಇದನ್ನು ಮಾಡಿದ್ದೇವೆ. ಇದನ್ನು ಐದು ಲಕ್ಷ ಮಾಡಿದರೂ ಒಳ್ಳೆಯದು, ಹತ್ತು ಲಕ್ಷ ಮಾಡಿದರೂ ಒಳ್ಳೆಯದು. 20 ಲಕ್ಷ ಮಾಡುವ ಸ್ಥಿತಿ ಮತ್ತು ಸಾಮರ್ಥ್ಯ ಈ ರಾಜ್ಯಕ್ಕೆ ಬರಲಿ ಎಂದು ನಾನು ಹಾರೈಸುತ್ತೇನೆ. ಆದರೆ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಏನು ಮಾಡಲು ಸಾಧ್ಯವಿದೆ. ಅದನ್ನು ಶಕ್ತಿಮೀರಿ ಈ ಸರ್ಕಾರ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿ ಸೇರಿಸಿರತಕ್ಕಂಥಾದ್ದನ್ನು ನಾವು ಈ ಬಿಲ್‌ನಲ್ಲಿ ಸೇರಿಸಿದ್ದೇವೆ. ಏಕೆಂದರೆ, ಫೈನ್ಯಾನ್ಸ್ ಮಿನಿಸ್ಟರ್‌ಗಳು ಬರುತ್ತಾರೆ. ಹೋಗುತ್ತಾರೆ. ಆದರೆ ಇದು ಕಾನೂನಿನಲ್ಲಿದ್ದರೆ, ಎಲ್ಲಿಯವರೆಗೆ ಕಾನೂನನ್ನು ಬದಲಾಯಿಸುವುದಿಲ್ಲ ಅಲ್ಲಿಯವರೆಗೆ ಯಾವ ಫೈನ್ಯಾನ್ಸ್ ಮಿನಿಸ್ಟರ್ ಕೂಡ ಇದನ್ನು ಮುಟ್ಟಲಾಗುವುದಿಲ್ಲ. ಆದಕಾರಣ ಬಜೆಟ್‌ನಲ್ಲಿ ಹೇಳಿರುವ ಮಾತಿಗೆ ಇನ್ನಷ್ಟು ಬಲವಾದಂಥ ಬುನಾದಿ ಹಾಕುವ ದೃಷ್ಟಿಯಿಂದ ನಾವು ಈ ಮಸೂದೆಯಲ್ಲಿ ಸೇರಿಸಿದ್ದೇವೆ. ಇದನ್ನು ನೀವು ಮೆಚ್ಚಬೇಕು ಮತ್ತು ಇಟ್ಟಿರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಅನುದಾನ ಕೊಡುವಂಥ ಶಕ್ತಿ ನಮ್ಮ ರಾಜ್ಯಕ್ಕೆ ಬರಲಿ ಎಂದು ಹಾರೈಸಬೇಕು. ಆಮೇಲೆ, ಸ್ಟೇಟ್ಸ್ ಸೆಕೆಂಡ್ ಫೈನಾನ್ಸ್ ಕಮೀಷನ್‌ಅನ್ನು ನಾವು ನೇಮಕ ಮಾಡಿದ್ದೇವೆ. ಕಾನೂನಿನ ಪ್ರಕಾರ ಒಂದು ಫೈನಾನ್ಸ್ ಕಮೀಷನ್ ಆಯಿತು. ಎರಡನೇ ಫೈನಾನ್ಸ್ ಕಮೀಷನ್‌ಅನ್ನು ನೇಮಕ ಮಾಡಿದ್ದೇವೆ. ಅದನ್ನು ಕೂಡ ಇದೇ ದೃಷ್ಟಿಯಿಂದ ಮಾಡಿದ್ದೇವೆ. ರಿಸೋರ್ಸಸ್‌ಗಳನ್ನು, ಫೈನಾನ್ಷಿಯಲ್ ಪೊಸಿಷನ್‌ಅನ್ನು ಯಾವ ರೀತಿ ಬಲಪಡಿಸಬೇಕು, ಎನ್ನುವುದರ ಬಗ್ಗೆ ಅವರು ಆಳವಾಗಿ ಚಿಂತನೆ ಮಾಡಿ ಸಲಹೆಗಳನ್ನು ಕೊಡುತ್ತಾರೆ. ಬರೀ ಅನುದಾನದಿಂದ ಪಂಚಾಯಿತಿಗಳು ಉಳಿಯಲು ಆಗುವುದಿಲ್ಲ. ಅನುದಾನದ ಜೊತೆಗೆ, ಇರುವ ಎಲ್ಲಾ ಅವಕಾಶಗಳನ್ನು ಅಂದರೆ ಹಣಕಾಸಿನ ವ್ಯವಸ್ಥೆಯನ್ನು ಬಲಪಡಿಸಬೇಕು. ಅದಕ್ಕೋಸ್ಕರ ಸೆಕೆಂಡ್ ಫೈನಾನ್ಸ್ ಕಮೀಷನ್‌ಅನ್ನು ಬಜೆಟ್ ಭಾಷಣದಲ್ಲಿ ಅನೌನ್ಸ್ ಮಾಡಿದ್ದಾರೆ. ಮತ್ತು ಆ ಕೆಲಸವನ್ನು ಇಷ್ಟರಲ್ಲೇ ನಡೆಸುವವರಿದ್ದಾರೆ. ಆದ್ದರಿಂದ ನಾವು ಮಾಡಿರತಕ್ಕಂಥ ವರ್ತನೆ ಯಾವ ಒಂದು ದುರುದ್ದೇಶದಿಂದಾಗಲೀ ಅಥವಾ ಯಾರಿಗೋ ಮನಸ್ತಾಪ ಮಾಡುವ ದೃಷ್ಟಿಯಿಂದಾಗಲೀ ಅಥವಾ ಕಡೆಗಣಿಸುವ ದೃಷ್ಟಿಯಿಂದಾಗಲೀ ಮಾಡಿಲ್ಲ ಎಂದು ಹೇಳಲು ನಾನು ಇಷ್ಟಪಡುತ್ತೇನೆ. ನನಗೂ 30 ವರ್ಷಗಳ ಅನುಭವವಿದೆ. ವೈಯಕ್ತಿಕವಾಗಿ ಹೇಳಬೇಕಾದರೆ, ನಾನಂತೂ ಯಾವ ಉದ್ದೇಶದಿಂದಲೂ ಕೂಡ ಒಂದು ಮಾತನ್ನೂ ಇಲ್ಲಿಯವರೆಗೆ ಆಡಿಲ್ಲ. ಒಂದು ಕೆಲಸವನ್ನೂ ಆ ಧಾಟಿಯಲ್ಲಿ ಮಾಡಿಲ್ಲ. ಹೊಸದಾಗಿ ನಾನು ಅದನ್ನು ಮಾಡಲೂ ಇಷ್ಟಪಡುವುಲ್ಲ.

(ಈ ಹಂತದಲ್ಲಿ ಸದಸ್ಯರಾದ ಭೈರೇಗೌಡರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು: ಬೈರೇಗೌಡರೇ, ಬೆಳಿಗ್ಗೆಯೇ ಆಗಿದೆಯಲ್ಲ.

ಶ್ರೀ ಸಿ. ಭೈರೇಗೌಡ: ಬೆಳಿಗ್ಗೆ ಆಗಿದೆ. ಆದ್ದರಿಂದ ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲ. ಅದನ್ನು ಮುಟ್ಟುವುದಕ್ಕೆ ಹೋಗಲಿಲ್ಲ. ಅವರಿಗೆ ಏನು ಹೇಳಬೇಕು ಎನ್ನತಕ್ಕಂಥಾದ್ದನ್ನು,

ಅವರಿಂದ ಪ್ರತಿಕ್ರಿಯೆ ಬಂದ ಕಾರಣದಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಲು ಹೋಗಲಿಲ್ಲ.

ಅಧ್ಯಕ್ಷರು: ಮಾನ್ಯ ಫೋರ್ಡಡೆಯವರೆ, ಮತ್ತೊಂದು ಸಲಹೆ. ಆರ್ಡಿನೆನ್ಸ್ ರೀಪ್ಲೇಸ್ ಮಾಡುವುದನ್ನು ಕೊನೇ ಘಳಿಗೆಯಲ್ಲಿ ತಂದರೆ ಬಹಳ ತೊಂದರೆಯಾಗುತ್ತದೆ. ಇನ್ನು ಮುಂದಾದರು ಬೇಗ ತನ್ನಿ. ಮಾರ್ಚ್ 15ನೇ ತಾರೀಖು ಅಧಿವೇಶನ ಪ್ರಾರಂಭವಾಯಿತು. ಮೊದಲನೇ ವಾರದಲ್ಲೇ ತಂದುಬಿಟ್ಟು ಪಾಸ್ ಮಾಡಿಸಿಕೊಂಡಿದ್ದರೆ ಸರಿಯಾಗುತ್ತಿತ್ತು. ಆದರೆ ಕೊನೇ ಘಳಿಗೆಯಲ್ಲಿ ತಂದಿದ್ದೀರಿ. ಇನ್ನು ಮುಂದೆಯಾದರೂ ಅಧಿವೇಶನ ಪ್ರಾರಂಭವಾದ ಒಂದು ವಾರದೊಳಗಾಗಿ ಇಂಥವುಗಳನ್ನು ಅಂದರೆ ಜರೂರಿರುವ ಯಾವುದೇ ಆರ್ಡಿನೆನ್ಸ್ ಅನ್ನು, ರೀಪ್ಲೇಸ್ ಮಾಡುವಂಥ ಬಿಲ್‌ಗಳನ್ನು ತರಬೇಕು ಎಂದು ನನ್ನ ಸಲಹೆ.

ಶ್ರೀ ಪಿ. ಬೈರೇಗೌಡ: ಮಾನ್ಯ ಅಧ್ಯಕ್ಷರು ಹೇಳುತ್ತಿರತಕ್ಕಂಥಾದ್ದು ಏನೆಂದರೆ, ಇವತ್ತು, ನಮಗೆ ಸರ್ಕ್ಯೂಲೇಟ್ ಮಾಡಿರತಕ್ಕಂಥ ಮುಖ್ಯ ಅಜೆಂಡಾದಲ್ಲಿ ಈ ಬಿಲ್ ಇರಲಿಲ್ಲ. ಅಡಿಷನಲ್ ಅಜೆಂಡಾ ತಂದು ಕೊನೇ ಘಳಿಗೆಯಲ್ಲಿ ತಂದಿರತಕ್ಕಂಥಾದ್ದು ಇದು. ಇದಕ್ಕೆ ನಮ್ಮ ನಿಯಮಾವಳಿಗಳಲ್ಲಿ ಅವಕಾಶ ಇಲ್ಲ ಎಂದು ನಾನು ಹೇಳುತ್ತಿಲ್ಲ. ಮಾನ್ಯ ಅಧ್ಯಕ್ಷರು ಹೇಳುತ್ತಿರುವಂತೆ ಮತ್ತು ನಮ್ಮ ಅಭಿಪ್ರಾಯದಂತೆಯೂ ಕೂಡ ಕೊನೇ ಘಳಿಗೆಯಲ್ಲಿ, ತರಾತುರಿಯಲ್ಲಿ ತಂದು ಮಸೂದೆ ಮಾಡತಕ್ಕಂಥಾದ್ದು ಒಳ್ಳೆಯದಲ್ಲ. ಈ ಮಸೂದೆ ಮಾತ್ರ ಎಂದಲ್ಲ, ಬೇರೆ ಮಸೂದೆಗಳನ್ನೂ ತರತಕ್ಕಂಥ ಕಾಲದಲ್ಲಿ, ರಾಜ್ಯದ ಮೇಲೆ, ಜನತೆಯ ಮೇಲೆ ತೀವ್ರವಾಗಿ ಪರಿಣಾಮ ಬೀರತಕ್ಕಂಥ ಮಸೂದೆಗಳು ಕೂಡ ಬರುವುದಕ್ಕೆ ಸಾಧ್ಯವಿದೆ. ಅಂಥವುಗಳಿಗೆ ಸಾಕಷ್ಟು ಕಾಲಾವಕಾಶ ಕೊಡಬೇಕು. ಒಟ್ಟಿನಲ್ಲಿ ಆ ಮಸೂದೆಗಳನ್ನು ಇಲ್ಲಿ ತರಬೇಕು ಎನ್ನುವುದು ನನ್ನ ಅಭಿಪ್ರಾಯ ಮತ್ತು ನಮ್ಮೆಲ್ಲರ ಅಭಿಪ್ರಾಯವೂ ಕೂಡ ಹೌದು. ಇದನ್ನು ತಾವೂ ಕೂಡ ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಯಾವುದೇ ಆರ್ಡಿನೆನ್ಸ್‌ಗಾಗಲೀ ಒಂದು ಕಾಲಾವಧಿ ಇರುತ್ತದೆ. ಅದರೊಳಗಾಗಿ ಅದನ್ನು ರೀಪ್ಲೇಸ್ ಮಾಡಬೇಕು ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂತಾದ್ದು. ಇದು ತಮಗೂ ಗೊತ್ತಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನಾನು ಇಲ್ಲ. ವಿಷಯ ಗೊತ್ತಿಲ್ಲದೇ ಇರತಕ್ಕಂಥವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಗೊಂದಲಮಯವಾದಂಥ ವಾತಾವರಣವಿದ್ದರೆ, ಯಾವುದು ಅವಶ್ಯಕವಾಗಿ ಮೊದಲು ಆಗಬೇಕು ಅದು ಆಗಲು ಸಾಧ್ಯವಾಗುವುದಿಲ್ಲ. ಜೀರೋ ಹವರ್‌ನಲ್ಲಿ ಬಂದಿರತಕ್ಕಂಥ ವಿಷಯಗಳನ್ನು ಬೆಳೆಸುತ್ತಾ ಹೋಗುವುದು ಆಗುತ್ತಿದೆ. ಇದಕ್ಕೆ ನಾವು, ನೀವು ಒಬ್ಬರೇ ಜವಾಬ್ದಾರರಲ್ಲ. ಇಲ್ಲಿರತಕ್ಕ ನಾವೆಲ್ಲರೂ ಜವಾಬ್ದಾರರು ಎಂದು ಹೇಳಬೇಕಾಗುತ್ತದೆ. ನಾನು ಇದನ್ನು ತಮ್ಮ ಗಮನಕ್ಕೆ ತರಬೇಕಾಗುತ್ತದೆ. ನಾನು ಕೊನೆಯವರೆಗೂ ಪದೇಪದೇ ಹೇಳಿ, ಮೂರು ದಿನ ಉಳಿದಾಗ ಇದನ್ನು ತರಲಾಗಿದೆ. ಇದು ಸುಲಭದಲ್ಲಿ ಪಾಸ್ ಮಾಡುವಂಥ ಒಂದು ಮಸೂದೆಯಾಗಿದೆ. ಇದನ್ನು ಪಾಸ್ ಮಾಡಿ ಗವರ್ನರ್ ಕಡೆ ಕಳುಹಿಸಬೇಕು.

ಅಧ್ಯಕ್ಷರು: ಪಾಸ್‌ಮಾಡೋಣ. ಅದರಲ್ಲೇನೂ ಅಭ್ಯಂತರವಿಲ್ಲ. ಆದರೆ ಇನ್ನೂ ಮೊದಲೇ ತರಬಹುದಾಗಿತ್ತು ಎಂದು ಹೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ: ಇದನ್ನು ತರಬೇಕು ಎಂದು ಅಧಿವೇಶನ ಪ್ರಾರಂಭವಾದಾಗಿನಿಂದ ಗೊತ್ತಿದೆ. ಆರ್ಡಿನೆನ್ಸ್ ಅರು ತಿಂಗಳಲ್ಲಿ ರೀಪ್ಲೇಸ್ ಮಾಡಲೇಬೇಕು. ಇದು ಇಂಪಾರ್ಟೆಂಟ್ ಐಟಂ ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇದಕ್ಕೆ ಸಾಕಷ್ಟು ಆದ್ಯತೆಯನ್ನು ತಾವು ಕೊಡಬೇಕಲ್ಲವೇ? ತಾವು ಕೊಡುವುದಿಲ್ಲ ಎಂದಲ್ಲ. ನಾನು ಹೇಳುವುದು. ಬಿಸಿನೆಸ್ ಅಡ್ವೈಸರಿ ಕಮಿಟಿಯವರು ಎಲ್ಲರೂ ಒಟ್ಟಾಗಿ, ಇಂಥ ಕಾನೂನುಬದ್ಧವಾದಂಥ ಕಾರ್ಯಕ್ರಮಕ್ಕೆ ಆದ್ಯತೆ ಕೊಡಬೇಕು. ಯಾವ ವಾತಾವರಣ ಇತ್ತೆಂದು ತಮಗೂ ಗೊತ್ತಿದೆ. ನಿಯಮಾವಳಿಗಳ ಪ್ರಕಾರ ಕೂಡ ಇಲ್ಲಿ ಕೆಲಸ ನಡೆಯುತ್ತಿರಲಿಲ್ಲ. ಒಂದು ಕಾಲಕ್ಕೆ ಇದರ ಮೇಲೆ ತಮಗೆ ಹತೋಟಿ ಕೂಡ ಇರಲಿಲ್ಲವೆಂದು ನನಗನ್ನಿಸುತ್ತದೆ. ಅಂಥ ಒಂದು ವಾತಾವರಣವನ್ನು ನಾವು ಬದಲಾಯಿಸಬೇಕು ಮತ್ತು ಸಾಮರಸ್ಯದ ವಾತಾವರಣ ತಂದೆ ನಿಯಮಾವಳಿ ಪ್ರಕಾರ ಕೆಲಸ ಆಗುತ್ತದೆ. ಅದು ಬರಲಿ ಎನ್ನುವ ದೃಷ್ಟಿಯಿಂದ ನಾವು ಈ ಅಮೆಂಡ್‌ಮೆಂಟನ್ನು ಒಪ್ಪಿದ್ದೇವೆ. ಇದು ಯಾವುದೇ ಹೆದರಿಕೆ, ಬೆದರಿಕೆಗೆ ಅಲ್ಲ. ಈ ಅಮೆಂಡ್‌ಮೆಂಟನ್ನು ಮತ್ತೆ ಅಲ್ಲಿಗೆ ವಾಪಸ್ಸು ತರಬೇಕು ಎಂದಿದ್ದರೆ ನಾವು ಒಪ್ಪುತ್ತಿರಲಿಲ್ಲ. ಇದರಲ್ಲಿನ ಡಿಸ್‌ಕ್ವಾಲಿಫಿಕೇಷನ್ ರೂಲ್ ಬಗ್ಗೆ ಹೇಳಬೇಕೆಂದರೆ, ಸಾವಿರಾರು ಜನ ಬಡವರಿದ್ದಾರೆ. ಅವರ ಮನೆಗಳಲ್ಲಿ ಶೌಚಾಲಯ ಇಲ್ಲ ಎನ್ನುವ ಕಾರಣದಿಂದ ನೀವು ಎಲೆಕ್ಷನ್‌ಗೆ ನಿಲ್ಲಬಾರದು ಎನ್ನುವುದಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ. ಸುದೈವದಿಂದ ಹೈಕೋರ್ಟಿನಲ್ಲಿ ಕೂಡ ಅದೇ ಅಭಿಪ್ರಾಯ ಬಂತು. ಆದರೆ ಒಂದು ವರ್ಷವಾದ ಮೇಲೆ ಕೂಡ ಅವರು ಶೌಚಾಲಯ ಕಟ್ಟಬಾರದು ಎನ್ನುವುದು ಸರ್ಕಾರದ ವಿಚಾರವಲ್ಲ. ನಾವು ಈ ವಿಚಾರವನ್ನು ಕ್ಯಾಬಿನೆಟ್ ಮುಂದೆ ಕೂಡ ಇಟ್ಟಿದ್ದೆವು. ಅದಕಾರಣ ಆ ವಿಚಾರಕ್ಕೆ ನಮ್ಮ ವಿರೋಧವಿಲ್ಲ. ಒಂದು ವರ್ಷದಲ್ಲಿ ಅವರು ಮಾಡಲಿ. ಮಾಡಿದರೆ ಒಂದು ಒಳ್ಳೆಯ ಉದಾಹರಣೆ ಜನಗಳಿಗೆ ಕೊಟ್ಟಂತಾಗುತ್ತದೆ. ನಮ್ಮ ವಾದ ಇಷ್ಟೇ, ಈ ಡಿಸ್‌ಕ್ವಾಲಿಫಿಕೇಷನ್ ರೂಲ್ ಇದ್ದ ತಕ್ಷಣ ಎಲ್ಲರೂ ಶೌಚಾಲಯಗಳನ್ನು ಕಟ್ಟುತ್ತಾರೆ ಎಂದು ನಾನು ನಂಬುವುದಿಲ್ಲ. ಇದು ಸಾಂಕೇತಿಕವಾಗಿ ಮಾಡಿರತಕ್ಕಂಥಾದ್ದು. ಈ ರೂಲ್‌ನಿಂದ ಯಾರಿಗೂ ತೊಂದರೆಯಾಗಬಾರದು. ಆ ದೃಷ್ಟಿಯಿಂದ ಹಳೆಯ ಕಾನೂನಿನಲ್ಲಿ ಇದ್ದುದರಲ್ಲಿ ಅರ್ಧ ಭಾಗ ತೆಗೆದು ಹಾಕಿ ಇನ್ನರ್ಧ ಭಾಗವನ್ನು ನಾವು ಉಳಿಸಿದ್ದೇವೆ. ರಚನಾತ್ಮಕವಾದಂಥ ಇಂಥ ಒಂದು ಸಲಹೆ ಬಂದಾಗ, ಇದರಿಂದ ಒಂದು ಒಳ್ಳೆಯ ವಾತಾವರಣ ಕಲ್ಪನೆಯಾಗುತ್ತದೆ ಎಂದಾಗ ಅದನ್ನು ಒಪ್ಪಿದ್ದೇವೆಯೇ ಹೊರತು ಯಾವ ಒಂದು ಭಯಕ್ಕಾಗಿಯೂ ಅಲ್ಲ ಎಂದು ಹೇಳಲು ಇಷ್ಟಪಡುತ್ತೇನೆ.

ಅಧ್ಯಕ್ಷರು: ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ, "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 4ರವರೆಗೆ

ಅಧ್ಯಕ್ಷರು: "ಖಂಡ 2 ರಿಂದ 4ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 4ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ,ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

ಅಧ್ಯಕ್ಷರು: ಬಿ.ಎ.ಸಿ.ಯಲ್ಲಿ ತೀರ್ಮಾನವಾಗಿರುವಂತೆ ದಿನಾಂಕ: 24-4-2000ರಂದು ಮಧ್ಯಾಹ್ನ 1-30 ನಿಮಿಷದವರೆಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕೆಂದಿರುವ ಇತರೆ ಸದಸ್ಯರು ಮಾತನಾಡಿದ ನಂತರ ಅದೇ ದಿನ ಮೂರು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುತ್ತಾರೆ. ಇಂದಿನ ಸದನವನ್ನು ಮುಕ್ತಾಯ ಮಾಡಿ ಮತ್ತೆ ಸೋಮವಾರ ಬೆಳಿಗ್ಗೆ ಹನ್ನೊಂದು ಘಂಟೆಗೆ ಸೇರೋಣ.

(ಸದನವು ಸಂಜೆ ಆರು ಗಂಟೆ ಮೂವತ್ತೆರಡು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: ಇಪ್ಪತ್ತ ನಾಲ್ಕನೇ ಏಪ್ರಿಲ್ ಮಾಹೆ ಎರಡು ಸಾವಿರ ಇಸವಿಯ ಸೋಮವಾರದಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಸೇರಲು ನಿಶ್ಚಯಿಸಿತು).

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 45, 350 ಪುಸ್ತಕಗಳು ದಿ : 09-10-2001.